(ಈ) ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) (ತಿದ್ದುಪಡಿ) ವಿಧೇಯಕ, 2009

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರ ಮತ್ತು ಪೌರಾಡಳಿತ ಸಚಿವರು) (ತೋಟಗಾರಿಕಾ ಸಚಿವರ ಪರವಾಗಿ):- ಮಾನ್ಯ ಅಧ್ಯಕ್ಷರೆ 2009 ರ ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ,

"2009 ರ ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರ ಮತ್ತು ಪೌರಾಡಳಿತ ಸಚಿವರು) (ತೋಟಗಾರಿಕಾ ಸಚಿವರ ಪರವಾಗಿ):- ಮಾನ್ಯ ಅಧ್ಯಕ್ಷರೆ, 2009 ರ ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು :- ವಿಧೇಯಕವನ್ನು ಮಂಡಿಸಲಾಗಿದೆ.

(ಅನುಬಂಧ - 4)

(ii) ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

1. ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ವಿಧೇಯಕ, 2009

ಪರ್ಯಾಲೋಚನಾ ಪ್ರಸಾವ

ಡಾ॥ ಬಿ.ಎಸ್. ಯಡಿಯೂರಪ್ಪ (ಮುಖ್ಯ ಮಂತ್ರಿಗಳು):- ಮಾನ್ಯ ಅಧ್ಯಕ್ಷರೆ 2009ರ ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಆರ್. ಅಶೋಕ್ (ಸಾರಿಗೆ ಸಚಿವರು) :- ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ರಾಜ್ಯದಲ್ಲಿ 2003 ರಲ್ಲಿ ಮಹಾನಗರ ಪಾಲಿಕೆಗಳಲ್ಲಿ ತೆರಿಗೆಗಳನ್ನು CVS system ಮುಖಾಂತರ ಸಂಗ್ರಹ ಮಾಡಲು ಜಾರಿಗೆ ಬಂದಿದೆ. ಆದರೆ, ಬೆಂಗಳೂರು ಮಹಾನಗರ ಪಾಲಿಕೆ 2000ರಲ್ಲಿ SAS system ನ್ನು ಜಾರಿಗೆ ತಂದಿದೆ. ಈ system 5 ವರ್ಷಗಳ ಕಾಲ ಇರಬೇಕೆಂದು ಆದೇಶ ಆದ ಮೇಲೆ ಆ system ನ್ನು adopt ಮಾಡುವುದಕ್ಕೆ ಆಗಲಿಲ್ಲ. 2003 ರಲ್ಲಿ ಅಂದಿನ ಸರ್ಕಾರ CVS system ನ್ನು ಜಾರಿಗೆ ತಂದಿತ್ತು. ಆ system ನ್ನು ನಾವು ಆದೇಶ ಮಾಡಿ ಜಾರಿಗೆ ತಂದಂಥ ಸಂದರ್ಭದಲ್ಲಿ ಬೆಂಗಳೂರಿನ ಜನ CVS system ನ್ನು ಜಾರಿಗೆ ತರುವುದರಿಂದ ತೆರಿಗೆಗಳು 400 ರಿಂದ 500 ಪಟ್ಟು ಜಾಸ್ತಿಯಾಗುತ್ತದೆ ಎಂದು ಪ್ರತಿರೋಧವನ್ನು ವ್ಯಕ್ತ ಮಾಡಿದರು. ಈ ತೆರಿಗೆ ಪದ್ಧತಿಯನ್ನು ತರಬಾರದೆಂದು ಹೋರಾಟ ಮಾಡಿದರು.

ಈ ಸರ್ಕಾರ ಬೆಂಗಳೂರಿಗೆ ಸಂಬಂಧಪಟ್ಟಂತೆ ಈ ತಿದ್ದುಪಡಿಯನ್ನು ತರಬೇಕು, ಸಿ.ವಿ.ಎಸ್. ಪದ್ಧತಿಯಿಂದ ತೊಂದರೆಯಾಗುತ್ತಿದೆ, ಎಸ್.ಎ.ಎಸ್. ಪದ್ಧತಿಯನ್ನು ಜಾರಿಗೆ ತರಬೇಕೆಂದು ಜನರೇನು ಆಗ್ರಹ ಮಾಡಿದ್ದರು, ಅದರ ಪ್ರಕಾರ ನಾಗರಿಕ ಸಂಘಗಳ ಸಭೆಯನ್ನು ಕರೆದು ಸಿ.ವಿ.ಎಸ್. ಬದಲಾಗಿ ಎಸ್.ಎ.ಎಸ್. ಪದ್ಧತಿಯನ್ನು ಬೆಂಗಳೂರು ಮಹಾನಗರ ಪಾಲಿಕೆಗೆ ಸೀಮಿತವಾಗಿ ಮಾತ್ರ ಇದನ್ನು ತರುತ್ತಿದ್ದು, ಉಳಿದ ಎಲ್ಲಾ ಕಡೆ ಈಗಾಗಲೇ ಸಿ.ವಿ.ಎಸ್. ಪದ್ಧತಿಯಲ್ಲಿ ಈಗಾಗಲೇ 2003 ರಿಂದ ತೆರಿಗೆ ವಸೂಲಾಗುತ್ತಿದೆ. ಈ ಮೊದಲು ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ 100 ವಾರ್ಡುಗಳು ಇತ್ತು. ಈಗ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಾದಮೇಲೆ ಬೆಂಗಳೂರಿನ ನಗರಸಭೆಗಳೇನಿತ್ತು ಅದು ಈ ಪದ್ಧತಿಯ ಒಳಗೆ ಬಂದಿದೆ, ಮತ್ತು 110 villages ಬಂದಿವೆ. ಹಳೆಯ ಕಾರ್ಪೊರೇಷನ್‌ನಲ್ಲಿ ಎಸ್.ಎ.ಎಸ್. ಪದ್ಧತಿಯಲ್ಲಿ ತೆರಿಗೆಯನ್ನು ಹಾಕಲಾಗುತ್ತಿತ್ತು. ಗ್ರಾಮ ಪಂಚಾಯಿತಿಗಳಲ್ಲಿ ಗ್ರಾಮ ಪಂಚಾಯಿತಿ ತೆರಿಗೆ system ಇತ್ತು. ಈ ರೀತಿ ಒಂದೇ ಕಾರ್ಪೊರೇಷನ್‌ನಲ್ಲಿ ಮೂರು ರೀತಿಯಾಗಿ ತೆರಿಗೆ ವಸೂಲಿ ಮಾಡುವ ಪದ್ಧತಿ ಇತ್ತು. ಆದ್ದರಿಂದ, ಅದನ್ನು ತೆಗೆದುಹಾಕಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಎಸ್.ಎ.ಎಸ್. ಪದ್ಧತಿಯನ್ವಯ ಮನೆಯ ತೆರಿಗೆಯನ್ನು ಮನೆಯ ಮಾಲೀಕರೇ ತೀರ್ಮಾನ ಮಾಡಿ ಭರಿಸತಕ್ಕದ್ದು. ಮಹಾನಗರ ಪಾಲಿಕೆ ಅದರಲ್ಲಿ 5-10 ಪರ್ಸೆಂಟ್‌ನ್ನು

ರ್ಯಾಂಡಂ ಆಗಿ ಪರಿಶೀಲನೆ ಮಾಡಿ ಯಾರಾದರೂ ಅಕ್ರಮವಾಗಿ ಅದರಲ್ಲಿ ತೆರಿಗೆಯನ್ನು ಕಟ್ಟದಿರತಕ್ಕವರನ್ನು ಗುರುತಿಸಿ ಅವರಿಗೆ ಪೆನಾಲ್ಟಿ ಹಾಕಿ ತೆರಿಗೆಯನ್ನು ಮಸೂಲಿ ಮಾಡುವುದು. ಈ ವ್ಯವಸ್ಥೆಯನ್ನು ತರಬೇಕೆಂಬ ಜನರ ಆಗ್ರಹವೇನಿತ್ತು ಅದರನ್ವಯ ಜನ ಸ್ನೇಹಿಯಾದ ಎಸ್.ಎ.ಎಸ್. ಪದ್ಧತಿಯನ್ನು ಈ ಸರ್ಕಾರ ಜಾರಿಗೆ ತರಬೇಕೆಂದು ತಂದಿದ್ದೇವೆ. ಇದು ಕೇವಲ ಬೆಂಗಳೂರಿಗೆ ಮಾತ್ರ ಸಂಬಂಧಪಡುತ್ತದೆ. ಇಡೀ ರಾಜ್ಯದಲ್ಲಿ ಸಿ.ವಿ.ಎಸ್. ಪದ್ಧತಿ ಇದೆ. ಆದರೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸಿ.ವಿ.ಎಸ್. ಪದ್ಧತಿ ಏನಿತ್ತು ಅದರ ಬದಲಾಗಿ ಎಸ್.ಎ.ಎಸ್. ಪದ್ಧತಿಯನ್ನು ಜಾರಿಗೆ ತರುತ್ತಿದ್ದೇವೆ. ಅದಕ್ಕೆ ಸಂಬಂಧಿಸಿದಂತೆ ತಿದ್ದುಪಡಿ ವಿಧೇಯಕವನ್ನು ತಂದಿದ್ದೇವೆ. ಅದನ್ನು ಅನುಮೋದನೆ ಮಾಡಬೇಕೆಂದು ವಿನಂತಿಸುತ್ತೇನೆ.

ಶ್ರೀ ವಿ. ಸೋಮಣ್ಣ (ಗೋವಿಂದರಾಜನಗರ) :- ಮಾನ್ಯ ಅಧ್ಯಕ್ಷರೆ, ಇವತ್ತು ಪೌರ ನಿಗಮಗಳ (ತಿದ್ದುಪಡಿ) ವಿಧೇಯಕ, 2009 ನ್ನು ಏನು ತಂದಿದ್ದಾರೆ, ಇದು ಸರ್ಕಾರಕ್ಕೆ ಒಂದು ಕಾಯಿದೆಯನ್ನು ಮಾಡಿ ಆ ಕಾಯಿದೆ ಅವೈಜ್ಞಾನಿಕವಾಗಿ ಕೂಡಿದೆಯೆಂದು ಈ ಹಿಂದಿನ ಬೆಳಗಾವಿ ಅಧಿವೇಶನದಲ್ಲಿ ಚರ್ಚೆಯಾದಾಗ ಆವತ್ತು ನಮ್ಮ ಯಾರ ಮಾತಿಗೂ ಬೆಲೆ ಕೊಡದೆಯೆ capital value system ಮಾಡಿ ಸುಮಾರು ಎರಡೂವರೆ ವರ್ಷಗಳ ಕಾಲ ಬೆಂಗಳೂರು ನಗರದ ಜನರಿಗೆ ತೆರಿಗೆ ಕಟ್ಟದಿರುವ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದರು. ಆವತ್ತು ಅಧಿಕಾರದಲ್ಲಿದ್ದ ಬಿ.ಜೆ.ಪಿ. ಮತ್ತು ಜನತಾದಳ ಸರ್ಕಾರಕ್ಕೆ ನಾವು ವಿನಂತಿ ಮಾಡಿದೆವು, ಸಿ.ವಿ.ಎಸ್. ಪದ್ಧತಿ ತಾಂತ್ರಿಕ ದೋಷಗಳಿಂದ ಕೂಡಿದೆ, ಅದರ ಅವಶ್ಯಕತೆ ಇಲ್ಲ, ಈ ಕಾಯಿದೆಯನ್ನು ಮಾಡುವಾಗ ಸಾಧ್ಯ, ಅಸಾಧ್ಯತೆಗಳ ಬಗ್ಗೆ ತಾವು ಪರಿಶೀಲನೆ ಮಾಡದೆಯೇ ಮೌಖಿಕವಾಗಿ ವಿಧೇಯಕವನ್ನು ತಂದಿದ್ದೀರಿ. ಇದರ ಬಗ್ಗೆ ಬೆಂಗಳೂರಿನ ಅಧಿವೇಶನದಲ್ಲಿ ಸವಿಸ್ತಾರವಾಗಿ ಚರ್ಚೆ ಮಾಡೋಣವೆಂದು ಹೇಳಿದರೂ ಸಹ, ನಾವು ಏನೆಲ್ಲ ಮಾಡಿದರೂ ಸಹ ಅದನ್ನು ತಂದು ಬೆಂಗಳೂರು ನಗರದ ಜನರನ್ನು ಕತ್ತಲೆಯ ಕೋಣೆಯಲ್ಲಿ ಇಡುವ ಕೆಲಸವನ್ನು ಮಾಡಿದ್ದಾರೆ. ಸರ್ಕಾರ ಇವತ್ತು ಎಚ್ಚೆತ್ತುಕೊಂಡು ಮತ್ತೆ ಹಳೆಯ ಪದ್ಧತಿಯನ್ನು ಜಾರಿಗೆ ತರುವ ಕೆಲಸವನ್ನು ಮಾಡಿ ಈ ವಿಧೇಯಕವನ್ನು ಇಲ್ಲಿ ಮಂಡನೆ ಮಾಡಿದ್ದಾರೆ. ಸಿ.ವಿ.ಎಸ್. ಪದ್ಧತಿಯೇನಿದೆ, ಮಾನ್ಯ ಸಚಿವರು ಇದನ್ನು ಬೆಂಗಳೂರಿಗೆ ಹೊರತುಪಡಿಸಿ ರಾಜ್ಯದ ಬೇರೆ ಬೇರೆ ನಗರ ಪಾಲಿಕೆಗಳಿಗೆ, ಮುನಿಸಿಪಾಲಿಟಿಗಳಿಗೆ ಅನ್ವಯವಾಗುವ ಹಾಗೆ, ಬೆಂಗಳೂರು ನಗರ ಬೃಹತ್

ಬೆಂಗಳೂರು ನಗರವಾಗಿರುವುದರಿಂದ ಇದಕ್ಕೆ ಎಸ್.ಎ.ಎಸ್. ಪದ್ಧತಿಯನ್ನು ತರುತ್ತೇವೆಂದು ಹೇಳಿದ್ದಾರೆ. ಮೊದಲು ಸಿ.ವಿ.ಎಸ್. ಪದ್ಧತಿಯನ್ನೇನು ಮಾಡಿದ್ದಾರೆ ಆ ಕಾಯಿದೆಯಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ಹೊರತುಪಡಿಸುವ ಕೆಲಸವನ್ನು ಇಲ್ಲಿ ಮಾಡಬೇಕಾಗುತ್ತದೆ. ಇದನ್ನು ಮಾಡದಿದ್ದರೆ ದ್ವಂದ್ವ ನೀತಿಯನ್ನು ಅನುಸರಣೆ ಮಾಡಿದಂತೆ ಆಗುತ್ತದೆ. ಇಲ್ಲಿ ನಾವು ಎರಡು ಮೂರು ವಿಚಾರಗಳನ್ನು ಗಮನಿಸಬೇಕಾಗುತ್ತದೆ. ಸಿ.ವಿ.ಎಸ್. ಪದ್ಧತಿಯೆಂದು ಏನು ಮಾಡಿ ಬೆಂಗಳೂರಿನಂಥ ದೊಡ್ಡ ನಗರಕ್ಕೆ ಕೋಟ್ಯಂತರ ರೂಪಾಯಿ ಹಣ ತೆರಿಗೆಯ ರೂಪದಲ್ಲಿ ಬರುವುದು ನಿಂತಿದೆ. ಆದ್ದರಿಂದ, ನಾವು ಇವತ್ತು ತೆರಿಗೆದಾರರ ಹತ್ತಿರ ಹೋಗಿ ಕೇಳಿದಾಗ, ಅಧಿಕಾರಿಗಳೇನಾದರೂ ಅದಕ್ಕೆ 18 ಪರ್ಸೆಂಟ್ ಬಡ್ಡಿಯನ್ನು ಕೊಡಬೇಕೆಂದು ತೀರ್ಮಾನವೇನಾದರೂ ಮಾಡಿದ್ದರೆ ತಕ್ಷಣವೇ ಅದನ್ನು ಕೈಬಿಡಬೇಕಾಗುತ್ತದೆ. ಏನನ್ನೂ ತಿಳಿಸದೆಯೆ ಮೌಖಿಕವಾಗಿ ಎಲ್ಲವನ್ನೂ ಮಾಡಿ ಸಿ.ವಿ.ಎಸ್. ಪದ್ಧತಿಯನ್ನು ತೆಗೆದು ಎಸ್.ಎ.ಎಸ್. ಪದ್ಧತಿಯನ್ನು ಮಾಡಿದ್ದೇವೆಂದು ಹೇಳುವುದಾದರೆ ಮೊದಲು ಗಮನಹರಿಸಬೇಕಾಗಿರುವುದೇನೆಂದರೆ, ಯಾರು ತೆರಿಗೆದಾರ ತೆರಿಗೆ ಕಟ್ಟುತ್ತೇನೆಂದು ಇದ್ದರೂ ಅವೈಜ್ಞಾನಿಕವಾಗಿ ತಂದಂಥ ಸಿ.ವಿ.ಎಸ್. ಪದ್ಧತಿಯಲ್ಲಿ ಏನೇನು ಅಡಕವಾಗಿತ್ತು ಅವೆಲ್ಲವನ್ನು ತೆಗೆದುಹಾಕಿ ಮತ್ತು ಬಡ್ಡಿಯನ್ನು ಕೊಡಬೇಕೆಂದು ಏನಿದೆ ಅದನ್ನು ಸಹ ತೆಗೆದುಹಾಕಬೇಕು. ಎಸ್.ಎ.ಎಸ್. ಏನಿದೆ ಅದನ್ನು ದಿ : 13-03-2003ರಲ್ಲಿ ಅಂದಿನ ಆಯುಕ್ತರು ಜಾರಿಗೊಳಿಸಿದರು. ಆ ಸಂದರ್ಭದಲ್ಲಿ self assementನ್ನು ಮಾಡುವಾಗ ಕೆಲವು ನಾಗರೀಕರು ಇದು ಸರಿಯಾಗಿಲ್ಲ, ಇದಕ್ಕೆ ಒಂದು ಕಾಯ್ದೆ ಮತ್ತೊಂದು ಮಾಡಿಲ್ಲ, ನೀವು ನೀವೇ ತೀರ್ಮಾನ ಮಾಡಿದ್ದೀರಿ ಎಂದು ಹೈಕೋರ್ಟ್‌ಗೆ ಹೋದರು. ಆಗ ಹೈಕೋರ್ಟ್‌ನವರು ನೀವು ಯಾವುದೇ ಹಣವನ್ನು ವಸೂಲಿ ಮಾಡಬೇಕಾದರೆ ಸರ್ಕಾರೇತರ ಸಂಸ್ಥೆಗಳೇನಿವೆ ಅವುಗಳಿಗೆ ಕಾಯಿದೆಯನ್ನು ಮಾಡದೆಯೆ ಮಾಡುವುದು ಸರಿಯಲ್ಲ, ಮೊದಲು ಕಾಯಿದೆ ರೂಪಿಸಿಕೊಂಡು ಅನಂತರ ಈ ಎಸ್.ಎ.ಎಸ್. ಮಾಡಿ ಎಂದು ನಿರ್ದೇಶನ ಕೊಟ್ಟರು. ಆಗ ಇವರು ಎಸ್.ಎ.ಎಸ್.ನ್ನು ಬಿಟ್ಟು ಸಿ.ವಿ.ಎಸ್.ನ್ನು ಜಾರಿಗೆ ತಂದರು. ಆದರೆ, ಈಗ ಮಾನ್ಯ ಸಚಿವರು ನಾವು ಎಸ್.ಎ.ಎಸ್.ಗೆ ಮಾತ್ರ ಸೀಮಿತರಾಗುತ್ತೇವೆ, ಸಿ.ವಿ.ಎಸ್. ಇಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡತಕ್ಕದ್ದು, ಯಾವುದೇ ತೆರಿಗೆದಾರರೇನಿದ್ದಾರೆ ಅವರಿಗೆ ಒಂದು ರೂಪಾಯಿ ಸಹ ಬಡ್ಡಿಯನ್ನು ಹಾಕಬಾರದು. ಸಿ.ವಿ.ಎಸ್. ಪದ್ಧತಿ

ಏನಿದೆ ಇದನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಹೊರತುಪಡಿಸಿ ಎಸ್.ಎ.ಎಸ್.ನ್ನು ಮಾತ್ರ ನಾವು ಕಾರ್ಯರೂಪಕ್ಕೆ ತಂದಿದ್ದೇವೆಂದು ಹೇಳಬೇಕಾಗುತ್ತದೆ. ಎಸ್.ಎ.ಎಸ್.ನ್ನು 5 ವಲಯಗಳನ್ನಾಗಿ ಮಾಡಿದ್ದಾರೆ. ಎಸ್.ಎ.ಎಸ್. ಪದ್ಧತಿಯನ್ನು 2000ಕ್ಕಿಂತ ಅದಕ್ಕೂ ಮೊದಲು ಕೆ.ಎಂ.ಸಿ. ಕಾಯಿದೆ 1976, ಪ್ರಕರಣ 148 ರಲ್ಲಿ ಯವುದೇ ತೆರಿಗೆಯನ್ನು ಮಹಾನಗರ ಪಾಲಿಕೆಗಳು 5 ವರ್ಷಕ್ಕೆ ಒಂದು ಸಲ ಹೆಚ್ಚಿಗೆ ಮಾಡುವ ಅಧಿಕಾರ ಆಯಾಯ ನಗರಪಾಲಿಕೆಗಳಿಗಿದೆ. ಆದರೆ, 20 ವರ್ಷಗಳಿಂದ ಹೆಚ್ಚು ಮಾಡದಿರುವುದರಿಂದ ಎಲ್ಲೋ ಒಂದು ಕಡೆ 2000ದಲ್ಲಿ ಮಾಡಿರುವ ಈ ಎಸ್.ಎ.ಎಸ್. ಏನಿದೆ ಇದನ್ನು ಮಾಡುವಾಗ ಯಾರನ್ನೂ ಕರೆದಿಲ್ಲ. ಆದರೆ, ಇದರಲ್ಲಿ 5 ವಲಯಗಳನ್ನು ಮಾಡಿದ್ದಾರೆ. ಅದಕ್ಕೆ ಸ್ಲ್ಯಾಬ್ ಪದ್ಧತಿಯನ್ನು ಆವತ್ತೇ ಮಾಡಿದ್ದಾರೆ. ನಾವು ಆವತ್ತು ಸಹ ಹೇಳಿದ್ದೇವೆ, ಇವತ್ತು ಸಹ ಹೇಳುತ್ತಿದ್ದೇವೆ. ಇವತ್ತು ನೀವೇನು ಎಸ್.ಎ.ಎಸ್.ನ್ನು ಜಾರಿಗೆ ತರುತ್ತಿದ್ದೀರಿ ಅದಕ್ಕೆ ನಮ್ಮ ತಕರಾರೇನಿಲ್ಲ. ಆದರೆ, ಸಬ್ ಕಮಿಟಿಯಲ್ಲಿ ಬಂದಂಥ ವರದಿಯನ್ನು ಯಾವುದೇ ಕಾರಣಕ್ಕೂ ಇದಕ್ಕೆ ಅನ್ವಯ ಮಾಡಬಾರದು. 2000 ದಲ್ಲಿ ಏನು ಮಾಡಿದ್ದಾರೆ ಅದನ್ನೇ ಜಾರಿಗೆ ತರುವುದಕ್ಕೆ ಸರ್ಕಾರ ಈ ಸದನದಲ್ಲಿ ಹೇಳಿಕೆ ನೀಡಬೇಕು. ಈ ಸ್ಲ್ಯಾಬ್ ಪದ್ಧತಿಯನ್ನು ಮಾಡುವಾಗ ಕೆಲವು ಲೋಪಗಳಿವೆ. ಎ,ಬಿ,ಸಿ,ಡಿ,ಇ,ಎಫ್. ಎಂದು ಏನು 6 ವಲಯಗಳನ್ನು ಮಾಡಿದ್ದಾರೆ. ಅದರಲ್ಲಿ ಕಮರ್ಶಿಯಲ್‌ಗೆ ಇಷ್ಟು ಎಂದು ಇರುತ್ತದೆ, ವಸತಿಗೆ ಇಷ್ಟು, ವಸತಿಯೇತರಕ್ಕೆ ಇಷ್ಟು ಎಂದು ನಿಗದಿ ಮಾಡಿರುತ್ತಾರೆ. ಇದರಲ್ಲಿಯೂ ಅವೈಜ್ಞಾನಿಕವಾಗಿರುತ್ತದೆ. ಇದರಲ್ಲಿ ಎಷ್ಟೊಂದು ಲೋಪಗಳಿದೆಯೆಂದು ಕೇಳಿದರೆ, ಸುಮಾರು 70 ಸಾವಿರ ಪ್ರಕರಣಗಳು ಎಸ್.ಎ.ಎಸ್. ನಲ್ಲಿ ತೀರ್ಮಾನವಾಗದಿರುವುದು ಇದೆ. ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುವುದೇನೆಂದರೆ, ಇವರೇನು ಎಸ್.ಎ.ಎಸ್. ಪದ್ಧತಿಯನ್ನು ವೈಜ್ಞಾನಿಕವಾಗಿ ಹೈಕೋರ್ಟ್‌ನ ನಿರ್ದೇಶನದನ್ವಯ ಮಾಡುತ್ತಿದ್ದಾರೆ ಅದನ್ನು ನಾವು ಒಪ್ಪಿಕೊಳ್ಳುತ್ತೇವೆ. ಆ ರೀತಿ ನಾವು ಒಪ್ಪಿಕೊಳ್ಳಬೇಕಾಗಿದ್ದರೆ ಇದರಲ್ಲೇನು ತಾಂತ್ರಿಕ ಮತ್ತು ಅವೈಜ್ಞಾನಿಕವಾದ ದೋಷಗಳಿದೆ ಅದನ್ನು ಸರಿಪಡಿಸಬೇಕಾಗುತ್ತದೆ. ಎಲ್ಲೋ ಒಂದು ಕಡೆ ಶ್ರೀಮಂತ ವರ್ಗದ ವ್ಯವಸ್ಥೆಗಳೇನಿದೆ, ಎಂ.ಜಿ. ರಸ್ತೆ ಇರಬಹುದು, ಕಮರ್ಶಿಯಲ್ ಸ್ಟ್ರೀಟ್ ಇರಬಹುದು, ಇನ್ನಿತರೆ ಅನೇಕ ಬಾಡಿಗೆ ಕಟ್ಟಡಗಳೇನಿದೆ ಇದರಿಂದ 5,10,20,50 ಲಕ್ಷ ರೂಪಾಯಿ ಕಂದಾಯವೇನು ಬರುತ್ತಿತ್ತು ಅದು ಕಡಿಮೆಯಾಗಿದೆ. ಎಸ್.ಎ.ಎಸ್. ಪದ್ಧತಿ ಬಂದ ತಕ್ಷಣ ಸಾಮಾನ್ಯರು, ಬಡವರು

ಅವರವರ ಆಸ್ತಿಯ ಬಗ್ಗೆ ಘೋಷಣೆ ಮಾಡಿದರು. ಆದರೆ, ಶ್ರೀಮಂತ ವರ್ಗದವರು, ಕೋಟ್ಯಂತರ ರೂಪಾಯಿ ಬಾಡಿಗೆ ತೆಗೆದುಕೊಳ್ಳತಕ್ಕವರು, 500-600 ಚದರ ಅಡಿ ಕಮರ್ಶಿಯಲ್ ಜಾಗ ಇರುವವರು ನಿಮಗೆ ಇದರಲ್ಲಿ ಸರಿಯಾದ ಮಾಹಿತಿಯನ್ನು ಕೊಟ್ಟಿಲ್ಲ. ಈ ರೀತಿ ಮಾಹಿತಿಯನ್ನು ಕೊಡದೇ ಇದ್ದರಿಂದ ಇವತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹಣ ಬರುವುದು ಕಡಿಮೆಯಾಗುತ್ತದೆಂದು ಸಿ.ವಿ.ಎಸ್. ಪದ್ಧತಿಯನ್ನು ತರತಕ್ಕ ಯೋಚನೆ ಮಾಡಿದರು. ನಾನು ತಮ್ಮ ಮೂಲಕ ಸರ್ಕಾರಕ್ಕೆ, ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರುವುದೇನೆಂದರೆ, ಮಾನ್ಯ ಸಚಿವರಾದ ಅಶೋಕ್‌ರವರು ಬೆಂಗಳೂರಿನ ಶಾಸಕರಿದ್ದಾರೆ, ಬೆಂಗಳೂರು ನಗರವನ್ನು ಪ್ರತಿನಿಧಿಸುವ ಸದಸ್ಯರುಗಳಿದ್ದಾರೆ. ಇವತ್ತು ನೀವೇನು ವಲಯಗಳನ್ನು ಮಾಡಿದ್ದೀರಿ ಅದು ಅವೈಜ್ಞಾನಿಕವಾಗಿದೆ. ಇದರ ಪ್ರಧಾನ ಕಾರ್ಯದರ್ಶಿಯವರು ಸಹ ಬೃಹತ್ ಬೆಂಗಳೂರಿನ ಆಯುಕ್ತರಾಗಿ ಕೆಲಸ ಮಾಡಿ ಅನುಭವ ಹೊಂದಿರುತ್ತಾರೆ. ಏಕೆ ಈ ಒಂದು ದ್ವಂದ್ವವಾದ ವ್ಯವಸ್ಥೆ? ಎರಡು ವರ್ಷಗಳಿಂದ ಕಂದಾಯವಿಲ್ಲ. ಕೊನೆಯದಾ, ನಿಮ್ಮ ಕಣ್ಣು ತೆರೆದುದಕ್ಕೆ ನಾನು ನಿಮ್ಮನ್ನು ಅಭಿನಂದಿಸುತ್ತೇನೆ. ಹಿಂದಿನ ಅಧಿವೇಶನದಲ್ಲೇ ನಾನು ಹೇಳಿದ್ದನ್ನು ಮಾಡಿದ್ದರೆ ಸಾವಿರಾರು ಕೋಟಿ ಹಣ ತೆರಿಗೆಯ ರೂಪದಲ್ಲಿ ಬರುತ್ತಿತ್ತು. ಬೆಂಗಳೂರು ಒಂದರಲ್ಲೇ ಸುಮಾರು 600 ಕೋಟಿಗಿಂತ ಹೆಚ್ಚು ಹಣ ಕೇವಲ ಒಂದೂವರೆ ತಿಂಗಳಿನಲ್ಲಿ ಬರುತ್ತದೆ. ಮಾರ್ಚ್ 31ನೇ ತಾರೀಖಿನೊಳಗೆ ಇದನ್ನು ತಕ್ಷಣ ಜಾರಿಗೆ ತಂದರೆ 600 ಕೋಟಿಗೂ ಮೇಲ್ಪಟ್ಟು ಹಣ ಬರುತ್ತದೆ. ಆದರೆ, ತೆರಿಗೆಯ ಜೊತೆಗೆ ಬಡ್ಡಿಯನ್ನು ಕಟ್ಟಿ ಎಂದು ಹೇಳಿದರೆ ಖಂಡಿತವಾಗಿ ಗಲಾಟೆ, ಗದ್ದಲವಾಗುತ್ತದೆ. ಆದ್ದರಿಂದ, ಬಡ್ಡಿ ಇಲ್ಲದಂತೆ ಅವರೇನು self assessment declare ಮಾಡಿದ್ದಾರೆ ಅದನ್ನು ಮಾತ್ರ ತೆಗೆದುಕೊಳ್ಳುವ ಕೆಲಸ ಮಾಡಬೇಕಾಗುತ್ತದೆ.

ಹೈಕೋರ್ಟ್‌ನ ನಿರ್ದೇಶನವೇನಿದೆ ಅದರಲ್ಲಿ ವ್ಯವಸ್ಥಿತವಾಗಿ ಹೇಳಿದ್ದಾರೆ. ಮಾನ್ಯ ಸಚಿವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಾಗಿದೆ ಎಂದು ಹೇಳಿದರು. ಆವತ್ತು ಮಾನ್ಯ ಅಶೋಕ್‌ರವರು ಇಲ್ಲೇ ಇದ್ದರು. ಮಾನ್ಯ ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದರು. ಇದನ್ನು ಸುಮಾರು ಒಂದೂವರೆ ವರ್ಷ ಕತ್ತಲೆ ಕೋಣೆಯಲ್ಲಿ ಇಟ್ಟಿದ್ದಿರಿ. ನನಗೆ ತಾವು ಎರಡು ಮಾಹಿತಿಯನ್ನು ಕೊಡಬೇಕಾಗುತ್ತದೆ. ಒಂದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಾದ ಮೇಲೆ ಎಸ್.ಎ.ಎಸ್. ಪದ್ಧತಿಯನ್ನು ಜಾರಿಗೆ ತಂದ ಮೇಲೆ ಕನಿಷ್ಠ 5 ವರ್ಷಗಳ

ಕಾಲ 2000ದಲ್ಲಿ ಏನು ಈ ವಲಯಗಳನ್ನು ಮಾಡಿದ್ದಾರೆ ಆ ಸ್ಲ್ಯಾಬ್‌ನ್ನು ಬದಲಾವಣೆ ಮಾಡದೆಯೇ ಅದನ್ನೇ ಜಾರಿಗೆ ತರತಕ್ಕದ್ದು. ಎರಡನೆಯದು, ಯಾವ್ಯಾವುದು ಅತಿ ಹೆಚ್ಚಿನ ಪ್ರಮುಖವಾದ ಕಮರ್ಶಿಯಲ್ ಜಾಗಗಳಿದೆ ಅಲ್ಲಿಗೆ ಎಲ್ಲೋ ಒಂದು ಕಡೆ ವಲಯಗಳನ್ನು ಮಾಡುವಾಗ ಬಿ, ಸಿ. ಮತ್ತೊಂದು ಝೋನ್‌ಗೆ ಸೇರಿಸಿ ಆ ಜಾಗ ಯಾವ ಝೋನ್‌ನಲ್ಲಿ ಇರಬೇಕಾಗಿತ್ತೋ ಆ ಝೋನ್‌ನಲ್ಲಿ ಇರುವುದನ್ನು ಬಿಟ್ಟು ಯಾವ ಝೋನ್‌ನಲ್ಲಿ ಅದು ಇರಬಾರದಿತ್ತೋ ಆ ಝೋನ್‌ಗೆ ಸೇರಿಸಿ ಸಾಮಾನ್ಯ ಜನರು ಹೆಚ್ಚಿನ ತೆರಿಗೆ ಕೊಡುವಂತೆ ಅವೈಜ್ಞಾನಿಕವಾಗಿ ಮಾಡಿದ್ದಾರೆ. ಇದರ ಬಗ್ಗೆ ಸಹ ತಾವು ಅಧಿಕಾರಿಗಳಿಗೆ ಸೂಚನೆ ಕೊಟ್ಟು ಪರಾಮರ್ಶೆ ಮಾಡಬೇಕಾಗುತ್ತದೆ. ಇದನ್ನು ಮಾಡದಿದ್ದರೆ, 20'X30', 30'X40', 40'X60' ರಲ್ಲಿ ಮನೆ ಮಾಡಿಕೊಂಡು ವಾಸ ಮಾಡತಕ್ಕವರಿಗೆ ಹೆಚ್ಚಿನ ಹೊರೆ ಬರುತ್ತದೆ. ದೊಡ್ಡ ದೊಡ್ಡ builders ಮತ್ತು ಕಮರ್ಶಿಯಲ್ ಕಾಂಪ್ಲೆಕ್ಸ್‌ನವರು ಇದರಿಂದ ತಪ್ಪಿಸಿಕೊಳ್ಳುತ್ತಾರೆ. ಇದು ನನ್ನ ಗಮನಕ್ಕೆ ಬಂದಿದೆ. ನಾನು ಕೂಡ ಸುಮಾರು 25 ವರ್ಷಗಳಿಂದ ಬೆಂಗಳೂರು ನಗರದ ಅನೇಕ ವಿಚಾರಗಳನ್ನು ಬಲ್ಲವನಾಗಿದ್ದು 70 ಸಾವಿರಕ್ಕೂ ಮೇಲ್ಪಟ್ಟು ಇಂಥ ಪ್ರಕರಣಗಳು ಬೆಂಗಳೂರು ನಗರದಲ್ಲಿ ತಪ್ಪಿಸಿಕೊಂಡಿರುವಂಥದ್ದು ಇದೆ. ಆದ್ದರಿಂದ, ಇದನ್ನು ಸರಿಯಾಗಿ ಕಾರ್ಯರೂಪಕ್ಕೆ ತಂದರೆ, ಅಧಿಕಾರಿಗಳು ಮತ್ತು ಕೆಳಹಂತದ ಅಧಿಕಾರಿಗಳು ಮನಸ್ಸು ಮಾಡಿದರೆ ಈ ಎಸ್.ಎ.ಎಸ್. ಪದ್ಧತಿಯಲ್ಲಿ ಸ್ಲ್ಯಾಬ್ ಪದ್ಧತಿಯನ್ನೇನು ಮಾಡಿದ್ದಾರೆ ಅದನ್ನು ಇನ್ನು ಕೂಡ ಕಡಿಮೆ ಮಾಡಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ನಾವು ಇನ್ನೂ ಹೆಚ್ಚಿನ ಸೌಲಭ್ಯವನ್ನು ಕೊಡಬಹುದಾಗುತ್ತದೆ. ಆದ್ದರಿಂದ ಸಿ.ವಿ.ಎಸ್. ಪದ್ಧತಿಯನ್ನು ತೆಗೆದು ಹಾಕಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಗೆ ಎಸ್.ಎ.ಎಸ್. ನ್ನು ಮಾಡುವುದರ ಮೂಲಕ ಆ 6 ವಲಯಗಳಲ್ಲೇನು ಲೋಪವಿದೆ ಅದನು ಸರಿಪಡಿಸಿ ಸರ್ಕಾರ ಮತ್ತು ಉಚ್ಚ ನ್ಯಾಯಾಲಯ ಕೊಟ್ಟಿರುವ ನಿರ್ದೇಶನದ ಪ್ರಕಾರ ತಾವು ಸಾಮಾನ್ಯ ಜನರಿಗೆ ಅರಿವನ್ನು ಮೂಡಿಸತಕ್ಕದ್ದು, ಮನವರಿಕೆಯಾಗತಕ್ಕದ್ದು, ಯಾವುದೇ ಕಾಯಿದೆಯನ್ನು ಸಾಮಾನ್ಯ ಜನರು ಒಪ್ಪಿಕೊಳ್ಳುವ ಕೆಲಸವನ್ನು ಮಾಡಲು ತಾವು ಮುಂದಾಗಬೇಕು. ಅದನ್ನು ಬಿಟ್ಟು ಎಲ್ಲೋ ಒಂದು ಕಡೆ ದುಡ್ಡು ಬರುತ್ತದೆಯೆಂದು ಅವರ ಮೇಲೆ ಬಡ್ಡಿಯನ್ನು ಹಾಕುವುದಾಗಲಿ ಬೇರೆ ಬೇರೆ ರೂಪದಲ್ಲಿ ನೋಡುವುದಾಗಲಿ ಆಗಬಾರದು. ಇನ್ನು 5 ವರ್ಷಗಳ ಕಾಲ 2000ನೇ ಇಸವಿಯಲ್ಲಿ ಇದ್ದಂಥ ಸ್ಲ್ಯಾಬ್ ಪದ್ಧತಿಯನ್ನು ಮುಂದುವರೆಸಿಕೊಂಡು ಹೋಗುವುದಕ್ಕೆ ಸರ್ಕಾರ ತನ್ನ ನಿರ್ಧಾರವನ್ನು ಇಲ್ಲಿ

ಪ್ರಕಟಿಸಬೇಕು. ಇದು ಬಹಳ ಜರೂರಾಗಿರುವುದರಿಂದ ತಕ್ಷಣವೇ ಇದರ ಬಗ್ಗೆ ಕ್ರಮ ಜರುಗಿಸುವುದರ ಬಗ್ಗೆ ಸರ್ಕಾರ ಮುಂದಾಗಬೇಕೆಂದು ವಿನಂತಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್. ದಿನೇಶ್ ಗುಂಡೂರಾವ್(ಗಾಂಧಿನಗರ) :- ಮಾನ್ಯ ಅಧ್ಯಕ್ಷರೆ, ಸರ್ಕಾರದವರು ಕರ್ನಾಟಕ ಪೌರನಿಗಮಗಳ (ತಿದ್ದುಪಡಿ) ವಿಧೇಯಕ ಬಿಲ್ಲನ್ನು ತಂದಿದ್ದಾರೆ. ಇದನ್ನು ತರತಕ್ಕ ಸಂದರ್ಭದಲ್ಲಿ, ಈಗಾಗಲೇ ಸದಸ್ಯರಾದ ಮಾನ್ಯ ಸೋಮಣ್ಣನವರು ಹೇಳಿದಂತೆ ಬೆಂಗಳೂರು ನಗರದ ಜನರಲ್ಲಿ ಈ ವಿಚಾರವಾಗಿ ಬಹಳಷ್ಟು ಗೊಂದಲ ಸೃಷ್ಟಿಯಾಗಿತ್ತು. ಈ ಸಿ.ವಿ.ಎಸ್. ಬೇಡ ಅದರಿಂದ ಜನರಿಗೆ ಹೊರೆಯಾಗುತ್ತದೆ ಎಂದು ಇದರ ವಿರುದ್ಧ ಜನರ ಆಕ್ರೋಶ, ಪ್ರತಿಭಟನೆ ದೊಡ್ಡ ಹೋರಾಟವೇ ಆಗಿದೆ. ಗೌರವಾನ್ವಿತ ರಾಜ್ಯಪಾಲರ ಆಡಳಿತದಲ್ಲಿ ಈ ಬಿಲ್ಲನ್ನು ತರಲು ಪ್ರಯತ್ನ ಆಯಿತು. ಆಗ ಅದರ ವಿರುದ್ಧ ದೊಡ್ಡ ಹೋರಾಟವಾಗಿದ್ದರಿಂದ ಗೌರವಾನ್ವಿತ ರಾಜ್ಯಪಾಲರು ಅದಕ್ಕೆ ಆರ್ಡಿನನ್ಸ್ ಮಾಡಿ ಇದನ್ನು ಸಧ್ಯಕ್ಕೆ ತರಬೇಕಾಗಿಲ್ಲ, ಮುಂದೆ ಸರ್ಕಾರ ಬಂದು, ಮಹಾನಗರ ಪಾಲಿಕೆಯಲ್ಲಿ ಅಧಿಕಾರಕ್ಕೆ ಬರಲಿ, ಆಗ ಅಲ್ಲಿ ಚರ್ಚೆಯ ಮೂಲಕ ಇದನ್ನು ಮಾಡಿಕೊಳ್ಳಲಿ ಎಂದು ಕೈಬಿಟ್ಟರು. ಈ ಬಿಲ್ಲನ್ನು ತರುವುದಕ್ಕಿಂತ ಮೊದಲು ಮಾನ್ಯ ಅಶೋಕ್‌ರವರು ಮತ್ತು ಕಟ್ಟಾ ಸುಬ್ರಹ್ಮಣ್ಯ ನಾಯ್ಡುರವರು ಏನು ಮಾಡಿದರೆ ಸರಿಯಾಗುತ್ತದೆ ಎಂಬ ಬಗ್ಗೆ ಜನರ ಅಭಿಪ್ರಾಯವನ್ನು ತೆಗೆದುಕೊಳ್ಳೋಣವೆಂದು ಬೆಂಗಳೂರು ನಗರದಲ್ಲಿ ಒಂದು ಸಭೆಯನ್ನು ಮಾಡಿದರು. ಆ ಸಭೆಯಲ್ಲಿ ಅವರು ನಾವು ಸಿ.ವಿ.ಎಸ್. ಪದ್ಧತಿಯನ್ನು ಜಾರಿಗೆ ತರುವುದಿಲ್ಲ, ಎಸ್.ಎ.ಎಸ್. ಪದ್ಧತಿಯನ್ನು ಜಾರಿಗೆ ತರುತ್ತೇವೆಂಬ ಮಾತನ್ನು ಕೊಟ್ಟರು. ಇದನ್ನು ಜಾರಿಗೆ ತರುವುದಕ್ಕಿಂತ ಮೊದಲು ಮತ್ತೊಮ್ಮೆ ನಾವು ಈ ಸಭೆಯನ್ನು ಕರೆಯುತ್ತೇವೆ, ಪ್ರತಿಯೊಂದು ಕ್ಷೇತ್ರದಲ್ಲಿ ಸಾರ್ವಜನಿಕರ ಅಭಿಪ್ರಾಯವನ್ನು ಪಡೆದು ನಂತರ ಸಮಗ್ರವಾದ ಮತ್ತು ನಮ್ಮ ನಗರದ ಜನರಿಗೆ ಉಪಯೋಗವಾಗತಕ್ಕ ರೀತಿಯಲ್ಲಿ ಕಾಯಿದೆ ತರುತ್ತೇವೆಂದು ಅವರುಗಳು ಆಶ್ವಾಸನೆಯನ್ನು ಕೊಟ್ಟಿದ್ದರು. ಆದರೆ, ದುರ್ದೈವ ಅವರು ಆ ಕೆಲಸವನ್ನು ಮಾಡಲಿಲ್ಲ. ಇದು ನಿಜವಾಗಿಯೂ ಎಸ್.ಎ.ಎಸ್. ಅಲ್ಲ. ಇದು ಸಿ.ವಿ.ಎಸ್. ನ ಇನ್ನೊಂದು ರೂಪ ಅಷ್ಟೆ. ಹಿಂದೆ ನಮ್ಮ ಸರ್ಕಾರವಿದ್ದಾಗ ಬೆಂಗಳೂರು ನಗರದಲ್ಲಿ ಪ್ರಗತಿಪರವಾದ ಎಸ್.ಎ.ಎಸ್. ನ್ನು ತಂದಿದ್ದರು ಮತ್ತು ಇವರೇನು ಎಸ್.ಎ.ಎಸ್. ತಂದಿದ್ದಾರೆ, ಇದಕ್ಕೂ ಅದಕ್ಕೂ ಸಂಬಂಧವಿಲ್ಲ. ಇದು ಮತ್ತೆ capital value ಮೇಲೆಯೇ ಹಾಕುತ್ತಿರುವುದು. ಆದುದರಿಂದ, ಈ

ಬಿಲ್ಲನ್ನು ತರುವುದಕ್ಕಿಂತ ಮೊದಲು ಬಹುಶಃ ನಮ್ಮ ಸರ್ಕಾರದ ಮುಖ್ಯಸ್ಥರು, ಅಧಿಕಾರಿಗಳು ಎಲ್ಲರ ಜೊತೆ ಚರ್ಚೆ ಮಾಡಿ ಇದನ್ನು ತಂದಿದ್ದರೆ ಚೆನ್ನಾಗಿರುತ್ತಿತ್ತು. ನಾವು ಈಗ ಎಷ್ಟೇ ವಿರೋಧ ಮಾಡಿದರೂ ಸಹ ಅವರು ಈ ಬಿಲ್ಲನ್ನು ಪಾಸ್ ಮಾಡಿಕೊಂಡು ಹೋಗುತ್ತಾರೆ. ಏಕೆಂದರೆ, ಅವರಲ್ಲಿ ಸಂಖ್ಯಾಬಲವಿದೆ. ತಾವು ಏನಾದರೂ ಮೊನ್ನೆ ಕೊಟ್ಟಿರತಕ್ಕ ಡ್ರಾಫ್ಟ್ ನೋಟಿಫಿಕೇಷನ್, ರೂಲ್ಸ್ ಫ್ರೇಮ್ ಮಾಡಿಕೊಟ್ಟಿದ್ದೀರಿ, ಈ ಬಿಲ್ಲನ್ನು ಪಾಸ್‌ಮಾಡಿಕೊಂಡು ಅದನ್ನೇನಾದರೂ ನೀವು ಅನುಷ್ಠಾನ ಮಾಡಿದರೆ ಬಹುಶಃ ಬೆಂಗಳೂರು ನಗರದ ಜನ ದಂಗೆ ಏಳತಕ್ಕ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಇದು ನಿಮ್ಮ ಲೋಕಸಭಾ ಮತ್ತು ಮಹಾನಗರ ಪಾಲಿಕೆಯ ಚುನಾವಣೆಯ ಫಲಿತಾಂಶದ ಮೇಲೆ ನೇರವಾದ ಪರಿಣಾಮ ಬೀರುತ್ತದೆ. ಏಕೆಂದರೆ, ಈ ನಿಯಮಾವಳಿಯನ್ನು ನೋಡಿದರೆ ಪ್ರತಿಯೊಬ್ಬರಿಗೂ ಸಹ 2,4,10,20 ಪರ್ಸೆಂಟ್ ವರೆಗೆ ಜಾಸ್ತಿಯಾಗತಕ್ಕ ವ್ಯವಸ್ಥೆ ನಿರ್ಮಾಣವಾಗುತ್ತದೆ. ಇದು ಗಂಭೀರವಾದ ವಿಚಾರ. ಇಲ್ಲಿ ಬಹಳ ಸರಳವಾಗಿ ಮಾಡುವುದಕ್ಕೆ ಸಹ ಅವಕಾಶವಿದೆ. ಈ ಸರ್ಕಾರ ಇದುವರೆಗೆ ಬೆಂಗಳೂರಿನ ಮಹಾನಗರಪಾಲಿಕೆಯ ಚುನಾವಣೆಯನ್ನು ಮಾಡಲಿಲ್ಲ ಮತ್ತು ಮಾಡುತ್ತಲೂ ಇಲ್ಲ. ಮಾಡುವ ಉದ್ದೇಶ ಕೂಡ ಇಲ್ಲ. ಅವರಿಗೆ ಇದನ್ನು ಹೇಗಾದರೂ ಮಾಡಿ ಮುಂದಕ್ಕೆ ಹಾಕಬೇಕು ಎಂಬ ಉದ್ದೇಶವಿದೆ. ನವೆಂಬರ್, ಡಿಸೆಂಬರ್ ಅಥವಾ ಮುಂದಿನ ವರ್ಷ ಮಾಡಬೇಕೆಂದಿದ್ದಾರೆ. ಈಗಾಗಲೇ ಮಹಾನಗರ ಪಾಲಿಕೆ ಬೆಂಗಳೂರಿನಲ್ಲಿ ಅಸ್ತಿತ್ವದಲ್ಲಿ ಇಲ್ಲದೇ 2 ವರ್ಷಗಳಾಗಿದೆ. ಈ ಬಿಲ್ಲನ್ನು ನಿಜಕ್ಕೂ ತರಬೇಕೆಂದಿದ್ದರೆ ಬೆಂಗಳೂರು ಮಹಾನಗರ ಪಾಲಿಕೆಯ ಚುನಾವಣೆಯನ್ನು ಮಾಡಿ, ಅಲ್ಲಿ ಇದು ಚರ್ಚೆಯಾಗಬೇಕಾಗಿತ್ತು. ಅದು ಆಗಲು ಈಗ ಅವಕಾಶಗಳು ಇಲ್ಲ. ಮತ್ತೆ ಇವತ್ತು ಇದರಿಂದ ಗೊಂದಲ ಸೃಷ್ಟಿಯಾಗುತ್ತದೆ. ಅದರಿಂದ ದೂರವಿರಬೇಕೆಂದರೆ ಇದನ್ನು ಬಹಳ ಸರಳವಾಗಿ ಮಾಡುವುದಕ್ಕೆ ಅವಕಾಶವಿದೆ. ಅದೇನೆಂದರೆ, ಹಿಂದೆ ಏನು ಎಸ್.ಎ.ಎಸ್. ಕಾಯಿದೆ ಇತ್ತು ಅದನ್ನು ಬೆಂಗಳೂರಿನ ಪ್ರತಿಯೊಬ್ಬರೂ ಸಹ ಒಪ್ಪಿಕೊಂಡಿದ್ದರು. ನಾವು ಸಹ ಒಪ್ಪಿಕೊಂಡಿದ್ದೆವು. ಆ ಎಸ್.ಎ.ಎಸ್. ಜಾರಿಗೆ ಬಂದಮೇಲೆ ಎಷ್ಟು ಹೆಚ್ಚು ಆಸ್ತಿ ತೆರಿಗೆ ವಸೂಲಾಗಿತ್ತು ಎಂಬುದು ಎಲ್ಲರಿಗೂ ಗೊತ್ತು. ಅದನ್ನೇ ನೀವು ಉಪಯೋಗಿಸಿಕೊಂಡು ಅದಕ್ಕೆ 10-20 ಪರ್ಸೆಂಟ್ tax ಜಾಸ್ತಿ ಮಾಡುತ್ತೇವೆಂದು ಹೇಳಿದ್ದರೆ ಸರಳವಾಗುತ್ತಿತ್ತು. ಬೆಂಗಳೂರಿನಲ್ಲಿ ಮುಖ್ಯವಾಗಿ ಲಕ್ಷಾಂತರ ಆಸ್ತಿಗಳಿಂದ ತೆರಿಗೆ ವಸೂಲಾಗುತ್ತಿಲ್ಲ. ಅದರಿಂದ ತೆರಿಗೆ ಬರುವುದರಲ್ಲಿ ನಮ್ಮಲ್ಲಿ enforcementನ್ನು ಜಾಸ್ತಿ

ಮಾಡಿಕೊಂಡು ಹಳೆಯ ಎಸ್.ಎ.ಎಸ್. ಪದ್ಧತಿಯೇ ಮಾಡಿಕೊಂಡರೆ ಯಾವುದೇ ಗೊಂದಲ ಇರುವುದಿಲ್ಲ. ನಿಮಗೆ ಹೊಸ ಬಿಲ್ಲು ಸಹ ಬೇಕಾಗಿಲ್ಲ. ಬೆಂಗಳೂರು ನಗರಕ್ಕೆ ಹಳೆಯ ಎಸ್.ಎ.ಎಸ್.ನ್ನೇ ತರುತ್ತೇವೆಂದು ಒಂದು ತಿದ್ದುಪಡಿಯನ್ನು ತಂದು ಅದಕ್ಕೆ ಹೊಸ ಬಡಾವಣೆಗಳನ್ನು ಸಹ ಸೇರಿಸಿಕೊಳ್ಳುತ್ತೇವೆಂದು ಹೇಳಿ ಮಾಡಿದ್ದರೆ ಯಾವುದೇ ಗೊಂದಲ ಸೃಷ್ಟಿಯಾಗುತ್ತಿರಲಿಲ್ಲ.

ಇವತ್ತು FKCCಯವರು ಗಲಾಟೆ ಮಾಡುತ್ತಿದ್ದಾರೆ, ಸಂಘ ಸಂಸ್ಥೆಗಳವರು ಗಲಾಟೆ ಮಾಡುತ್ತಿದ್ದಾರೆ. ಇಲ್ಲಿ ಅನೇಕ ವಿಚಾರಗಳ ಬಗ್ಗೆ ಇವತ್ತು ಚರ್ಚೆ ಮಾಡಬೇಕಾಗಿರಲಿಲ್ಲ. ಆದರೂ ಕೂಡ ಇವತ್ತು ಇವರು ತಂದಿದ್ದಾರೆ. ನಾವು ಇದನ್ನು ಮಾಡಿಯೇ ಮಾಡುತ್ತೇವೆ ಎಂದು ಅಧಿಕಾರಿಗಳ ಮಾತನ್ನೋ ಅಥವಾ ಇನ್ಯಾರ ಮಾತನ್ನೋ ಕೇಳಿಕೊಂಡು ಇವತ್ತು ತರುತ್ತಿದ್ದಾರೆ. ಏಕೆಂದರೆ, ಬೆಂಗಳೂರು ನಗರಕ್ಕೆ tax ಕೂಡ collection ಆಗಬೇಕಾಗಿದೆ. ಇಲ್ಲದಿದ್ದರೆ ನಾವು ಹೇಗೆ ಅಭಿವೃದ್ಧಿ ಮಾಡಲು ಸಾಧ್ಯವಾಗುತ್ತದೆ? ಇವತ್ತು ನಮಗೆ ಈ tax collection ಆಗಿ, ಕನಿಷ್ಠ 600-700 ಕೋಟಿ ರೂ. ಗಳಷ್ಟು ಆದಾಯ ಬರತಕ್ಕ ಅವಕಾಶವಿದೆ. ಇವತ್ತು ಅದು ಆಗುತ್ತಿಲ್ಲ. ಅದನ್ನು ಮಾಡುವುದಕ್ಕೆ ನಾವು ನಿಮಗೆ ಸಹಕಾರ ನೀಡುತ್ತೇವೆ. ಖಂಡಿತವಾಗಿಯೂ ನಿಮಗೆ ನಾವು ಸಹಕಾರ ಕೊಡುತ್ತೇವೆ. ಆದರೆ ತಾವು ದಯವಿಟ್ಟು ಬಿಲ್‌ನಲ್ಲಿ ಇರತಕ್ಕ ಕೆಲವೊಂದು ಅಂಶಗಳನ್ನು amendment ಮಾಡಬೇಕು. Section 108A ನಲ್ಲಿ ನಾವು unit area value ಪ್ರಕಾರ property tax ಅನ್ನು collect ಮಾಡುತ್ತೇವೆ ಎಂದಿದೆ. Unit area value ಎಂದರೆ ಏನು? ಎಂದು ಇದರಲ್ಲಿ ಹೇಳಿದ್ದಾರೆ.

> "Unit Area Value" means an average rate of expected returns from the property per sq.ft., per month determined by the Commissioner...

ಇದನ್ನು real estate, market information ಮತ್ತು mass appraisal method ಮೂಲಕ determine ಮಾಡಲಾಗುವುದು ಎಂದು ಬಿಲ್‌ನಲ್ಲಿ ಇದೆ. Mass appraisal method ಎಂದರೆ ಏನು? Real estate information ಎಂದರೆ ಏನು? ಇದನ್ನು ನೀವು ಹೇಗೆ

fix ಮಾಡಿಕೊಳ್ಳುತ್ತೀರಿ? SASನಲ್ಲಿ annual rental value ಮೇಲೆ tax charge ಮಾಡಲಾಗುತ್ತಿತ್ತು. ಈಗ ನೀವು ಇದನ್ನು unit area value ಎಂದು ಮಾಡಿ, CVS ಅನ್ನು ಮತ್ತೊಂದು ಬೇರೆ ರೀತಿಯಲ್ಲಿ ತರತಕ್ಕಂಥ ಅಂಶ ಇದಾಗಿದೆ. ನಾನು ಇದಕ್ಕೆ ಏನೊಂದು amendment ಅನ್ನು propose ಮಾಡುತ್ತೇನೆ ಎಂದರೆ, ಇದನ್ನು ನೀವು based on rental value ಎಂದು ಮಾಡಿ. Expected rate of rental income ಎಂದು ಮಾಡಿ. ಅದರ ಪ್ರಕಾರ ನೀವು calculation ಮಾಡಿ. Expected rate of rental income ಪ್ರಕಾರ ನೀವು tax ಹಾಕಿದರೆ, property tax evaluation ಮಾಡಿದರೆ ಖಂಡಿತವಾಗಿಯೂ ಜನ ಅದನ್ನು ಒಪ್ಪಿಕೊಳ್ಳುತ್ತಾರೆ. ಇದು SAS ನಲ್ಲಿ ಇರತಕ್ಕಂಥ ಒಂದು ಅಂಶ. ಜನ ಅದನ್ನು ಸ್ವೀಕಾರ ಮಾಡಿದ್ದಾರೆ, ಅದೊಂದು popular legislation ಆಗಿದೆ. ಅದನ್ನು ತಾವು ದಯವಿಟ್ಟು amendment ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಇನ್ನೊಂದು 108A 2[b]ಯಲ್ಲಿ

"[b] an area used as parking area in a non-residential building and being charged for its use by the owner or the occupier"

ಎಂದು ಇದೆ. ಅದಕ್ಕೆ ನಾವು tax fix ಮಾಡುತ್ತೇವೆಂದು ಹೇಳಿದ್ದೀರಿ. ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರದಲ್ಲಿ parking ಸಮಸ್ಯೆ ಎಷ್ಟಿದೆ ಎಂದು ನಮಗೆಲ್ಲಾ ಗೊತ್ತಿದೆ. Park ಮಾಡಲಿಕ್ಕೆ ಅವಕಾಶ ಇರತಕ್ಕಂಥ ಕಟ್ಟಡಗಳಿಗೆ, ಅದರ ಮೇಲೆ ನಾವು tax ಹಾಕುತ್ತೇವೆಂದರೆ, ನೀವು Parking ವ್ಯವಸ್ಥೆ improve ಮಾಡುವುದಕ್ಕೆ ಹೇಗೆ encourage ಮಾಡಿದಂತಾಗುತ್ತದೆ? ಅವನಿಗೆ incentive ಏನು ಇರುತ್ತದೆ ಹೇಳಿ? ಅಂತಹವರಿಗೆ ನೀವು ಹೆಚ್ಚು incentives ಕೊಡಬೇಕು. 'ನೀನು ಹೆಚ್ಚಿಗೆ parking ಮಾಡಪ್ಪ, ನಿನಗೆ ಹೆಚ್ಚಿಗೆ tax ಹಾಕುವುದಿಲ್ಲ' ಎಂದು ಹೇಳಿ ನೀವು parking ಮಾಡುವುದನ್ನು promote ಮಾಡಬೇಕು. ಆದುದರಿಂದ ತಾವು ದಯವಿಟ್ಟು ಇದನ್ನು ತೆಗೆಯಬೇಕು. ಈ ಬಿಲ್ ಅನ್ನು move ಮಾಡಿರುವ ಮಾನ್ಯ ಅಶೋಕ್‌ರವರು ದಯವಿಟ್ಟು ಇದನ್ನು consider ಮಾಡಬೇಕು. ಬೆಂಗಳೂರು ನಗರದಲ್ಲಿ

parking ವ್ಯವಸ್ಥೆ ಮಾಡಲಿಕ್ಕೆ ಎಷ್ಟು ಸಮಸ್ಯೆಗಳಿವೆ ಎಂಬುದನ್ನು ನೀವೇ ನೋಡುತ್ತಿದ್ದೀರಿ. ಅಂತಹ ಕಟ್ಟಡಗಳಿಗೆ, ಯಾರು ಹೆಚ್ಚು parking ಮಾಡಲಿಕ್ಕೆ ಅವಕಾಶ ಮಾಡಿಕೊಡುತ್ತಾರೋ, ಅವರಿಗೆ ನೀವು tax ಅನ್ನು ಹಾಕಬಾರದು. ದಯವಿಟ್ಟು ಇದಕ್ಕೆ amendment ಅನ್ನು ತನ್ನಿ. ನೀವು ಇದನ್ನು ತೆಗೆದು ಹಾಕಬೇಕು. Parking areaಗೆ tax ಹಾಕುವ ಈ clause ಅನ್ನು ನೀವು ತೆಗೆದುಬಿಡಿ. ಅದಕ್ಕೆ ನೀವು exemption ಅನ್ನು ನೀಡಬೇಕು. Property tax exemption ಮಾಡುವುದರಲ್ಲಿ ಅಥವಾ waive ಮಾಡುವುದರಲ್ಲಿ ಇದನ್ನು ನೀವು ಸೇರಿಸಿಕೊಳ್ಳಬೇಕು. Parking facilities ಇರತಕ್ಕ buildings ಗೆ ನಾವು waive ಮಾಡುತ್ತೇವೆ. ಅದಕ್ಕೆ charge ಮಾಡುತ್ತಾರೋ, charge ಮಾಡುವುದಿಲ್ಲವೋ, ಅದು ನಮಗೆ ಬೇಕಾಗಿಲ್ಲ. ಒಂದು ವೇಳೆ charge ಮಾಡಿದ್ದರೂ, 2 ರೂಪಾಯಿಯನ್ನೋ, 3 ರೂಪಾಯಿಯನ್ನೋ ಅಥವಾ 5 ರೂಪಾಯಿಯನ್ನೋ charge ಮಾಡಬಹುದು. ನಮಗೆ ಅದು ಬೇಕಾಗಿಲ್ಲ. ಯಾವ building ಮಾಲೀಕ parking facilities ಕೊಡುತ್ತಾನೋ, ಅವನಿಗೆ property tax ತೆಗೆದು ಹಾಕಿ. ದಯವಿಟ್ಟು ಅದನ್ನು ನೀವು ಮಾಡಬೇಕು. ಈ taxನ ವಿಚಾರದಲ್ಲಿ ಅನೇಕ ಕಡೆಗಳಲ್ಲಿ ಇಲ್ಲಿ ಅವರು exemption ಕೊಟ್ಟಿದ್ದಾರೆ. Self owned residential properties ಗೆ ಮಾತ್ರ 50% ನಾವು rebate ಕೊಡುತ್ತೇವೆಂದು ಹೇಳಿದ್ದಾರೆ. ಇವತ್ತು ಹಿಂದೆ ಇದ್ದಂತಹ ಕಾನೂನಿನಲ್ಲಿ even self owned commercial propertiesಗೂ ಕೂಡ 50% rebate ಕೊಡುತ್ತಿದ್ದರು. ಅದನ್ನು ಏಕೆ ನೀವು ಈಗ exclude ಮಾಡಿದ್ದೀರಿ? ನೀವು ಯಾರಿಗೆ self owned commercial property ಇದೆಯೋ ಅವರಿಗೂ 50% rebate ಕೊಡಬೇಕು. ಯಾರು business ಮಾಡುವುದಕ್ಕೆ ಆಸಕ್ತಿಯನ್ನು ತೋರಿಸುತ್ತಾನೋ, ಅಂತಹವರಿಗೆ ನೀವು ಹೆಚ್ಚಿನ ಉತ್ತೇಜನ ಕೊಡಬೇಕು. Self owned residential property ಗೆ ಯಾವ ರೀತಿಯಲ್ಲಿ ನೀವು rebate ಕೊಡುತ್ತೀರೋ, ಅದೇ ಪ್ರಕಾರ ತಾವು ದಯವಿಟ್ಟು ಈ self owned commercial propertyಗೂ ನೀವು rebate ಕೊಡಬೇಕು. ಅದನ್ನು include ಮಾಡಿಕೊಳ್ಳಬೇಕು. ದಯವಿಟ್ಟು ಅದರ ಬಗ್ಗೆ amendment ಅನ್ನು ನೀವು ತೆಗೆದುಕೊಳ್ಳಬೇಕೆಂದು ನಾನು

ಹೇಳಲಿಕ್ಕೆ ಇಷ್ಟಪಡುತ್ತೇನೆ. Rebate ಕೊಡುವುದರಲ್ಲಿ ವಿಧವೆಯರು, ex-service men ಮತ್ತು Senior citizens ಇದ್ದಾರೆ. ಅಂತಹವರನ್ನೂ ಕೂಡ ನಾವು tax exemption ವ್ಯಾಪ್ತಿಗೆ ತರಬೇಕು. ಅನೇಕ ನಗರಗಳಲ್ಲಿ ಇಂತಹ ಕಾನೂನುಗಳಿವೆ. ಅನೇಕ ಕಡೆ ನೂರಕ್ಕೆ ನೂರರಷ್ಟು exemption ಕೊಟ್ಟಿದ್ದಾರೆ. ಆದ್ದರಿಂದ ದಯವಿಟ್ಟು ಇಂತಹ ವ್ಯಕ್ತಿಗಳಿಗೆ, ಅಂದರೆ ಯಾರಿಗೆ income ಇಲ್ಲವೋ ಅಂತಹವರಿಗೆ ಅಥವಾ ಯಾವುದೇ ರೀತಿ income generation ವರ್ಷ ವರ್ಷ ಜಾಸ್ತಿ ಆಗದೇ ಇರತಕ್ಕ ಜನರಿಗೆ ನಾವು protection ಕೊಡಬೇಕು. ಮಕ್ಕಳು ಇಲ್ಲದಿರತಕ್ಕ senior citizensಗೆ, ವಿಧವೆಯರಿಗೆ ಅಥವಾ ex-service men ಅಂತಹವರಿಗೆ ತಾವು ಈ ಬಿಲ್‌ನಲ್ಲಿ include ಮಾಡಿಕೊಳ್ಳಬೇಕು ಎಂದು ನಾನು ನಿಮಗೆ ಹೇಳಲಿಕ್ಕೆ ಇಷ್ಟ ಪಡುತ್ತೇನೆ. Section 108A ಒಂದರಲ್ಲೇ ಎಲ್ಲದಕ್ಕೆ provision ಮಾಡಿಕೊಡಲಿಕ್ಕಾಗುವುದಿಲ್ಲ. Section 105, 107 ಅಥವಾ 110ನಲ್ಲಿ ಅದು ಬರುತ್ತದೆ. ನೀವು ಅದನ್ನೆಲ್ಲಾ ಇದರಲ್ಲಿ ತೆಗೆದುಕೊಂಡು ಬಂದಿಲ್ಲ. ಅದಕ್ಕೋಸ್ಕರ ಮತ್ತೆ ನೀವು ಅದನ್ನು ಮಾಡಬೇಕಾಗುತ್ತದೆ. ಇನ್ನೊಂದು ಬಹಳ ಮುಖ್ಯವಾಗಿ ಇರತಕ್ಕದ್ದು, 16ರಲ್ಲಿ ಪ್ರತಿ ಮೂರು ವರ್ಷಕ್ಕೆ 15% ಜಾಸ್ತಿ ಮಾಡುತ್ತೇವೆಂದು ಹೇಳಿದ್ದಾರೆ. ಈ ಹಿಂದೆ SASನಲ್ಲಿ ಐದು ವರ್ಷಗಳವರೆಗೆ ನಾವು ಏನೂ ಬದಲಾವಣೆ ಮಾಡುವುದಿಲ್ಲ ಎಂದಿತ್ತು. ಇವತ್ತು ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರ, pay revision ಮಾಡಿದರೂ ಸಹ 5 ವರ್ಷಕ್ಕೊಮ್ಮೆ ಅಥವಾ 10 ವರ್ಷಕ್ಕೊಮ್ಮೆ ಮಾಡುತ್ತದೆ. ನೀವು ಏಕೆ ಪ್ರತಿ ಮೂರು ವರ್ಷಕ್ಕೊಮ್ಮೆ ಇದನ್ನು ಜಾಸ್ತಿ ಮಾಡಲಿಕ್ಕೆ ಹೊರಟಿದ್ದೀರಿ? ದಯವಿಟ್ಟು ನೀವು ಆ clause ಅನ್ನು ತೆಗೆಯಿರಿ. ಪ್ರತಿ 5 ವರ್ಷಕ್ಕೆ ನಾವು enhancement ಮಾಡುತ್ತೇವೆ ಎಂದು ಹೇಳಿ. ಆ enhancement ಅನ್ನೂ ಕೂಡ ನೀವು ಸ್ವಲ್ಪ reasonable ಆಗಿ ಮಾಡಿ. ಪ್ರತಿ ವರ್ಷವೂ 5% ಜಾಸ್ತಿ ಮಾಡಬೇಕೆಂಬ ಹಠ ನಿಮಗೇಕೆ? ಯಾರೋ ಒಬ್ಬನಿಗೆ income generation ಆಗುತ್ತಿದ್ದರೆ, ಅಥವಾ ಅವನಿಗೆ ಹೆಚ್ಚಿನ ಅಭಿವೃದ್ಧಿ ಆಗುತ್ತಿದ್ದರೆ, ಅಂತಹವನು ಮಾತ್ರ ಕಟ್ಟುತ್ತಾನೆ. ಸಾಮಾನ್ಯ ಜನ, ಬಡ ಜನರು, lower middle class ಜನ ಹೇಗೆ ಅದನ್ನು afford ಮಾಡಲಿಕ್ಕೆ ಆಗುತ್ತದೆ? ನಿಮ್ಮ ಪ್ರಕಾರ 5 ವರ್ಷಕ್ಕೆ ಅವನ tax 20-25% ಜಾಸ್ತಿಯಾಗುತ್ತದೆ. ಮೂರು ವರ್ಷಕ್ಕೊಮ್ಮೆ ತೆರಿಗೆ ಹೆಚ್ಚಳ ಮಾಡಲಾಗುವುದು ಎಂಬುದನ್ನು ತಾವು

ದಯವಿಟ್ಟು ತೆಗೆದು ಹಾಕಬೇಕು. ಇದನ್ನು ನೀವು amendment ಮಾಡಿ, ಐದು ವರ್ಷಕ್ಕೊಮ್ಮೆ ಹೆಚ್ಚಳ ಮಾಡಲಾಗುವುದೆಂದು ತಿದ್ದುಪಡಿಯನ್ನು ತನ್ನಿ. ಪ್ರತಿ ವರ್ಷ 5% ಹೆಚ್ಚಳ ಎನ್ನುವುದನ್ನು ನೀವು remove ಮಾಡಿ. ಆವತ್ತಿನ ಪರಿಸ್ಥಿತಿ ಹೇಗಿದೆ? ಅವತ್ತಿನ rental income ಎಷ್ಟಿದೆ? ಅವತ್ತಿನ ವಾತಾವರಣ ಹೇಗಿದೆ ಎಂಬುದನ್ನು ನೋಡಿ, ಅದರ ಪ್ರಕಾರ scientific ಆಗಿ ನೀವು ತೆರಿಗೆ ನಿಗದಿ ಮಾಡಿ. Blanket ಆಗಿ ಏಕೆ ನೀವು ಪ್ರತಿ ವರ್ಷ ಜಾಸ್ತಿ ಮಾಡಿಕೊಂಡು ಹೋಗುತ್ತೀರಿ? ಈಗ ನಮ್ಮ ರಾಜ್ಯದಲ್ಲಿ recession ಇದೆ. ಯಾರಿಗೂ ಸಂಪಾದನೆ ಆಗುತ್ತಿಲ್ಲ. Land ಇದ್ದವರಿಗೆ ದುಡ್ಡು ಸಿಗುತ್ತಿಲ್ಲ, rental income ಕಡಿಮೆ ಆಗಿದೆ, ಬಿದ್ದು ಹೋಗಿದೆ. ಬಾಡಿಗೆಗೆ ಯಾರೂ ಬರುತ್ತಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಹೇಗೆ ತೆರಿಗೆ ಕಟ್ಟುತ್ತೀರಿ? ನೀವು ಅದೇ ರೇಟ್ ಅನ್ನು ಇಟ್ಟುಕೊಂಡು, ಅದನ್ನೂ ಕೂಡ enhancement ಮಾಡಿಕೊಂಡು ನೀವು ಕಟ್ಟಿ ಎಂದು ಹೇಳಿದರೆ ಹೇಗಾಗುತ್ತದೆ? ಏನಾದರೂ rental income ಜಾಸ್ತಿಯಾಗಿದ್ದರೆ, ಜಾಸ್ತಿ charge ಮಾಡಿ. Rental income ಕಡಿಮೆ ಆಗಿದ್ದರೆ, ಕಡಿಮೆ charge ಮಾಡಿ. ಈ ರೀತಿಯಾಗಿ ಸ್ವಲ್ಪ ತಾವು ಸಾಮಾನ್ಯ ಜನರ ಬಗ್ಗೆ ಆಲೋಚನೆ ಮಾಡಿ. ನಗರದ ಹಿತದೃಷ್ಟಿಯಿಂದ, ನಗರಕ್ಕೇನು ಅನುಕೂಲ? ಎಂಬುದನ್ನು ನೋಡಿ. ಸರ್ಕಾರದ draft rules notification ನೋಡಿದರೆ, ನಿಜಕ್ಕೂ ಕೂಡ ಗಾಬರಿಯಾಗುತ್ತದೆ. Balconyಗಳಿಗೆ charge ಮಾಡಿದ್ದಾರೆ, terrace ಗಳಿಗೆ built up area ತೆಗೆದುಕೊಂಡಿದ್ದಾರೆ, open space ಬಿಟ್ಟಿರುವುದನ್ನು ಗಣನೆಗೆ ತೆಗೆದುಕೊಂಡಿದ್ದಾರೆ. ಯಾರಾದರೂ ದೊಡ್ಡ ಇಂಡಸ್ಟ್ರಿಯವರು, ಸುಮಾರು ಎರಡು ಎಕರೆ open space area ಇಟ್ಟುಕೊಂಡಿದ್ದರೆ, ಅದಕ್ಕೂ ಅವನು tax ಕಟ್ಟಬೇಕಾಗುತ್ತದೆ. ಎಲ್ಲಾ industryಗಳು CMC areaದಲ್ಲೇ ಇವೆ. ಅವನಿಗೆ ಎಕರೆಗಟ್ಟಲೆ open area ಇರುತ್ತದೆ. ಇವತ್ತಿನ ಪರಿಸ್ಥಿತಿಯಲ್ಲಿ ಅದಕ್ಕೆ ಅವನು ಎಷ್ಟು tax ಕಟ್ಟಬೇಕಾಗುತ್ತದೆ? ಅವನಿಗೆ ಪ್ರತಿ ಸಲ ಸುಮಾರು 60ರಷ್ಟು tax ಜಾಸ್ತಿಯಾಗುತ್ತದೆ. ಅಂದರೆ 6 ಸಾವಿರ ಪರ್ಸೆಂಟ್ ಅವನಿಗೆ tax ಜಾಸ್ತಿಯಾಗುತ್ತದೆ. ಇದರ ಬಗ್ಗೆ ಮಾನ್ಯ ಅಶೋಕ್‌ರವರು ಸ್ವಲ್ಪ ಆಲೋಚನೆ ಮಾಡಬೇಕು. ಈ industrial areaಗಳೆಲ್ಲಾ ನಿಮ್ಮ ಹಳೆಯ ಉತ್ತರಹಳ್ಳಿ ಕ್ಷೇತ್ರದ ವ್ಯಾಪ್ತಿಯಲ್ಲೇ ಬರುತ್ತವೆ. ಈಗ ನೀವು ಪ್ರತಿನಿಧಿಸುತ್ತಿರುವ ಕ್ಷೇತ್ರದ ವ್ಯಾಪ್ತಿಗೆ

ಬರುವುದಿಲ್ಲ. ಜನ ನಿಮ್ಮ ವಿರುದ್ಧ ತಿರುಗಿ ಬೀಳುತ್ತಾರೆ. ಆ ಕ್ಷೇತ್ರವನ್ನು ಬಿಟ್ಟು ಹೋಗಿರುವುದರಿಂದ ಮಾನ್ಯ ಅಶೋಕ್‌ರವರು ಬಹುಶಃ, 'ಆಯಿತು ಬಿಡಿ, ನಮಗೇನು ಆಗಬೇಕಾಗಿದೆ?' ಎಂದು ಈ ರೀತಿ ಮಾಡುತ್ತಿದ್ದಾರೆ ಎನಿಸುತ್ತದೆ. ಇದು ಬಹಳ ಗಂಭೀರವಾದಂತಹ ಅಂಶವಾಗಿದೆ. Open spaceಗೆ ನೀವು ಇಷ್ಟೊಂದು ತೆರಿಗೆಯನ್ನು ಹಾಕಿದರೆ, ಏನಾಗಬಹುದು ಹೇಳಿ? ಇದರ ಬಗ್ಗೆ ಚರ್ಚೆಯಾದ ಸಂದರ್ಭದಲ್ಲಿ, 'ಮತ್ತೆ ನಿಮ್ಮ ಹತ್ತಿರ ಬರುತ್ತೇವೆ, public hearing ಮಾಡುತ್ತೇವೆ, ಕ್ಷೇತ್ರವಾರು ಬರುತ್ತೇವೆ' ಎಂದು ಮಾನ್ಯ ನಾಯ್ಡುರವರು ಮತ್ತು ಮಾನ್ಯ ಅಶೋಕ್‌ರವರು ಹೇಳಿದರು. ಯಾರೂ ಬರಲಿಲ್ಲ, ಯಾರನ್ನೂ ಕೇಳಲಿಲ್ಲ. ಹೋದ ಎರಡು ವರ್ಷದ ಹಿಂದೆ ಯಾವ ರೀತಿಯಾಗಿ ಇದೇ ಬೆಳಗಾಂ sessionನಲ್ಲಿ ಅಕ್ರಮ-ಸಕ್ರಮ ಬಿಲ್ ಅನ್ನು ತಂದು, ತರಾತುರಿಯಲ್ಲಿ ಯಾವುದೂ ಚರ್ಚೆಯಾಗದೆ pass ಮಾಡಿಸಿಕೊಂಡರೋ, ಅದೇ ಪ್ರಕಾರ ಪಾಸ್ ಮಾಡಿಸಿಕೊಂಡು ಹೋಗೋಣ ಎಂಬ ಉದ್ದೇಶದಿಂದ ಇದನ್ನು ನೀವು ತಂದಿದ್ದೀರಿ. ನಾನು ನಿಮಗೆ ಎಚ್ಚರಿಕೆ ಕೊಡುತ್ತಿದ್ದೇನೆ, ಇದೇ ಪ್ರಕಾರ ನೀವು ಮಾಡಿಕೊಂಡು ಹೋದರೆ, ಜನ ನಿಮಗೆ ಉತ್ತರ ಕೊಡುತ್ತಾರೆ. ಮುಂದೆ ಬರತಕ್ಕಂಥ ಲೋಕಸಭಾ ಚುನಾವಣೆಯಲ್ಲಿ ಜನ ಇದಕ್ಕೆ ನಿಮಗೆ ಉತ್ತರ ಕೊಡುತ್ತಾರೆ. ಈ ಕಾನೂನಿನ ವಿರುದ್ಧ ಕೋರ್ಟ್‌ಗೆ ಹೋಗುತ್ತಾರೆ, stay ತರುತ್ತಾರೆ, ಗಲಾಟೆಗಳಾಗುತ್ತವೆ. ದಯವಿಟ್ಟು ಇದಕ್ಕೆಲ್ಲಾ ಅವಕಾಶ ಕೊಡಬೇಡಿ.

ಇದು SAS Bill ಅಲ್ಲ, ಇದು ಬೇರೆ ಹೊಸ ಕಾನೂನು, ಈ ಜನಪರ ಕಾನೂನು ಅಲ್ಲ. ಜನಪರವಾದ ಕಾನೂನನ್ನು ತನ್ನಿ ಎಂದು ನಾವು ಹೇಳುತ್ತಿರುವುದು, ಮಹಾನಗರಪಾಲಿಕೆ ಚುನಾವಣೆಯನ್ನು ಮಾಡಿ, ಈ ಬಗ್ಗೆ ದೀರ್ಘವಾದ ಚರ್ಚೆಗಳಾಗಲಿ ಅಲ್ಲಿಯವರೆಗೂ ಹಿಂದೆ ಇದ್ದ SAS ತಂದು implement ಮಾಡಿ, ಎಲ್ಲರಿಂದಲೂ ಆಸ್ತಿ ತೆರಿಗೆ ವಸೂಲ್ಮಾಡುವುದನ್ನು ಮಾಡಿ, ಅದರ ನಂತರ ಬೇಕಾದರೆ ನಾವು ಏನು ತಿದ್ದುಪಡಿ ಬೇಕೊ ಮಾಡೋಣ. ಈಗ ನಾವು ಬಿಲ್ಲನ್ನು ಮಾಡೇ ಮಾಡುತ್ತೇವೆಂದು ಹೇಳಿದರೆ, ನಾನೇನು ಅಮೆಂಡ್‌ಮೆಂಡ್ ಅನ್ನು ಪ್ರಪೋಸ್ ಮಾಡಿದ್ದೇನೆ, ಅದನ್ನು ದಯವಿಟ್ಟು ಅದರಲ್ಲಿ ಸೇರಿಸಿಕೊಳ್ಳಿ. ಸೇರಿಸಿಕೊಂಡರೆ ನಾವು ಸ್ವಲ್ಪಮಟ್ಟಿಗಾದರೂ ಬೆಂಬಲ ಕೊಡಬಹುದು. ಇಲ್ಲವಾದರೆ, ನಾವು ಖಂಡಿತವಾಗಿಯು ಇದನ್ನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ, ಇದನ್ನು ನಾವು ತಿರಸ್ಕಾರ ಮಾಡಬೇಕಾಗುತ್ತದೆ, ಇದರ ವಿರುದ್ಧ ನಾವು ಹೋರಾಟವನ್ನು ಮಾಡುತ್ತೇವೆನ್ನುವ

ಎಚ್ಚರಿಕೆಯನ್ನು ಕೊಟ್ಟು, ಇದುವರೆವಿಗೆ ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ನನ್ನ ಧನ್ಯವಾದಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ [ವಿರೋಧ ಪಕ್ಷದ ನಾಯಕರು] :- ಮಾನ್ಯ ಅಧ್ಯಕ್ಷರೆ, ತಾವು ಒಪ್ಪಿದರೆ, ಇದಕ್ಕೆ ಸುಲಭವಾದ ಮತ್ತು ಪರಿಹಾರವನ್ನು ಕೊಡಬೇಕೆಂದು ನನಗನಿಸುತ್ತದೆ. ಏಕೆಂದರೆ, ಇಡೀ ರಾಜ್ಯದ ಹೆಚ್ಚು ಕಡಿಮೆ, 1/5th ಪಾಪ್ಯುಲೇಷನ್ ಬೆಂಗಳೂರಿನಲ್ಲಿದೆ. ಮತ್ತು ಸುಮಾರು 21-24 ಸಣ್ಣಪುಟ್ಟ ಪಟ್ಟಣಗಳು, ಪಟ್ಟಣ ಪಂಚಾಯಿತಿಗಳು ಎಲ್ಲವು ಕೂಡ ಹೊಸದಾಗಿ ಇದರಲ್ಲಿ ಸೇರಿವೆ. ಅದಕ್ಕೆ ಇದನ್ನು ತರಾತುರಿಯಲ್ಲಿ ಇದನ್ನು ಪಾಸ್ ಮಾಡುವುದಕ್ಕಿಂತ, ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಿ, ಅಲ್ಲಿ ದೀರ್ಘವಾಗಿ ಆಲೋಚನೆ ಮಾಡಲು ಆಗುತ್ತದೆ ಮತ್ತು ನೀವು ತಂದಂತಹ ಬಿಲ್ ಅನ್ನು ಎಫೆಕ್ಟಿವ್ ಆಗಿ ಅನುಷ್ಠಾನಕ್ಕೆ ತರುವುದಕ್ಕೆ ಸಹಾಯವಾಗುತ್ತದೆ. ಇಲ್ಲವೆಂದರೆ, ಮತ್ತೆ ಏನಾಗುತ್ತದೆ ಎಂದರೆ, ಅವರು ಕೊಟ್ಟಂಥ ಸಲಹೆಗೆ ನೀವು ಒಪ್ಪುವುದಿಲ್ಲ, ನೀವು ಹೇಳಿದ್ದನ್ನು ಅವರು ಒಪ್ಪುವುದಿಲ್ಲ, ಇದು ಪುನಃ ರಾಜಕೀಯ ಚಳುವಳಿಗೆ ಕಾರಣವಾಗಬಾರದು. ಜಾಯಿಂಟ್ ಸೆಲೆಕ್ಟ್ ಕಮಿಟಿಯಲ್ಲಿ ಆ ಮನೆಯ ಸದಸ್ಯರು ಇರುತ್ತಾರೆ, ಈ ಮನೆಯ ಸದಸ್ಯರು ಇರುತ್ತಾರೆ ಎಲ್ಲೆಲ್ಲಿ ತಪ್ಪಿದೆ ಎಂದು ಇದನ್ನು ನ್ಯಾಯವಾಗಿ ಇಬ್ಬರೂ ಕುಳಿತು ಆಲೋಚನೆ ಮಾಡುತ್ತಾರೆ. ಸರ್ಕಾರದವರೂ ಆಲೋಚನೆ ಮಾಡುತ್ತಾರೆ, ಬೇರೆ ನಮ್ಮ ಸದಸ್ಯರೂ ಕೂಡ ಗಂಭೀರವಾಗಿ, ಇದರಲ್ಲಿ ಏನಿದೆ ಎನ್ನುವುದರ ಬಗ್ಗೆ ಪ್ರೋಸ್ ಅಂಡ್ ಕಾನ್ಸ್ ತಿಳಿದುಕೊಂಡು ಅವರು ಸಲಹೆಯನ್ನು ಕೊಡುತ್ತಾರೆ. ಒಂದು ಸಾರಿ ಜಾಯಿಂಟ್ ಸೆಲೆಕ್ಟ್ ಕಮಿಟಿಯಲ್ಲಿ ಒಪ್ಪಿಗೆಯಾದ ಮೇಲೆ, ನ್ಯಾಚುರಲಿ ಪುನಃ ಅದನ್ನು ಇಲ್ಲಿ ತಂದು ಚರ್ಚೆ ಮಾಡುವ ಅವಶ್ಯಕತೆ ಇಲ್ಲ, ಅದು ಒಳ್ಳೆಯ ರೀತಿಯಿಂದಾಗುತ್ತದೆ ಮತ್ತು ಎಲ್ಲರ ಹೊಂದಾಣಿಕೆಯಿಂದ ಮಾಡಲು ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಇದು ಏನಾಗುತ್ತೆಂದರೆ, ಸದಸ್ಯರಾದ ದಿನೇಶ್ ಗುಂಡೂರಾವ್ ಹೇಳಿದಂತೆ, ಕೆಲವು ವಿಷಯಗಳಲ್ಲಿ ಈಗ 5% ಎಂದರೆ, 15 ವರ್ಷದಲ್ಲಿ ಡಬಲ್ ಆಗುತ್ತದೆ. ಕೆಲವು ಸಲ ಏನಾಗುತ್ತದೆಂದರೆ, ಅನೇಕ ಸಾರಿ ಆಸ್ತಿಯ ಕಿಮ್ಮತ್ತು ಬಿದ್ದುಹೋಗುತ್ತದೆ, ಕೆಲವು ಸಲ ಹೆಚ್ಚಿಗೆ ಆಗುತ್ತದೆ. ಅದೇ ರೀತಿಯಾಗಿ ಐಟಿ ಬಿದ್ದುಹೋದ ಮೇಲೆ, ಬೆಂಗಳೂರಿನಲ್ಲಿ ಅನೇಕ ಕಡೆ ಬಾಡಿಗೆಗಳು ಕುಸಿದು ಬಿದ್ದಿವೆ, ಕೇಳುವವರೇ ಇಲ್ಲ, ಮನೆಗಳನ್ನು ತೆಗೆದುಕೊಳ್ಳುವವರೇ ಇಲ್ಲ. ಜನ ಬಹಳಷ್ಟು ಸರ್ವೀಸ್ ಅಪಾರ್ಟ್‌ಮೆಂಟ್ಸ್ ಎಂದು ಮಾಡಿದರು. ಇವತ್ತೆಲ್ಲಾ ಖಾಲಿ ಇವೆ. ಇವತ್ತು ಬೆಂಗಳೂರು ಬೆಳೆಯುತ್ತಿರುವ ನಗರವೆಂದು ಸಾವಿರಾರು ಫ್ಲಾಟ್ಸ್ ಬಂದಿವೆ

ಲಕ್ಷಾಂತರ ಫ್ಲಾಟ್ಸ್ ಖಾಲಿ ಬಿದ್ದಿವೆ. ನಮ್ಮ ಸದಸ್ಯರಾದ ರೋಷನ್ ಬೇಗ್ ಹೇಳುವಂತೆ, buy one, take one free ಈ ಪರಿಸ್ಥಿತಿ ಇದ್ದ ಮೇಲೆ, ಈ ಬಗ್ಗೆ ಗಂಭೀರವಾಗಿ ಆಲೋಚನೆ ಮಾಡಿ ಮಾಡಲು ಸಾಧ್ಯವಾಗುತ್ತದೆ, ಜಾಯಿಂಟ್ ಸೆಲೆಕ್ಟ್ ಕಮಿಟಿ ತಮ್ಮ ಅಧೀನದಲ್ಲೇ ಬರುತ್ತದೆ, ಅದರಲ್ಲಿ ಚೆನ್ನಾಗಿ ಆಳವಾಗಿ ಅಭ್ಯಾಸ ಮಾಡಿದವರನ್ನು, ಈ ಬಗ್ಗೆ ಮಾಹಿತಿ ಇರುವವರನ್ನು ಸೇರಿಸಿ ಒಂದು ಜಾಯಿಂಟ್ ಸೆಲೆಕ್ಟ್ ಕಮಿಟಿ ರಚಿಸಿ ಇದನ್ನು ಅದಕ್ಕೆ ರೆಫರ್ ಮಾಡಬೇಕು ಎಂದು ನಾನು ಕೇಳುತ್ತೇನೆ.

ಶ್ರೀ ಕೆ.ಜೆ. ಜಾರ್ಜ್ [ಸರ್ವಜ್ಞ ನಗರ] :- ಸನ್ಮಾನ್ಯ ಸಭಾಧ್ಯಕ್ಷರೆ, ಈ ಪ್ರಾಪರ್ಟಿ ಟ್ಯಾಕ್ಸ್ ಬಿಲ್ ಏನಿದೆ, ಇದು ತುಂಬಾ ಗೊಂದಲವನ್ನು ಸೃಷ್ಟಿ ಮಾಡಿರುವಂತಹದ್ದಾಗಿದೆ. ಇದನ್ನು ಮೊದಲು ತಂದಾಗ ಬಿಜೆಪಿಯವರು ಸಂಪೂರ್ಣವಾಗಿ ವಿರೋಧ ಮಾಡಿದರು, ಈ ಕ್ಯಾಪಿಟಲ್ ವ್ಯಾಲ್ಯು ಸಿಸ್ಟಂ ತರುವುದಕ್ಕೆ ಬಿಡುವುದಿಲ್ಲ, ಜನರಿಗೆ ಉಪಯುಕ್ತವಾದ ಒಂದು ಟ್ಯಾಕ್ಸ್ ಸಿಸ್ಟಂ ಅನ್ನು ಮಾಡುತ್ತೇವೆಂದು ಪ್ರಣಾಳಿಕೆಯಲ್ಲಿ ಹೇಳಿದರು. ಮತ್ತೆ ಸರ್ಕಾರ ಬಂದ ಮೇಲೆ ಸನ್ಮಾನ ಸಚಿವರಾದ ಅಶೋಕ್ ಅವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚನೆ ಮಾಡಿದರು, ಸಾರ್ವಜನಿಕರ ಸಭೆಯನ್ನೂ ಸಹ ಕರೆದಿದ್ದರು. ಬಹುಶ: ಆ ಸಾರ್ವಜನಿಕ ಸಭೆಯಲ್ಲಿ ನಮ್ಮ ಶಾಸಕರಿಗೆ ಮಾತನಾಡಲು ಅವಕಾಶ ಕೊಡಲಿಲ್ಲ. ನಮ್ಮ ದಿನೇಶ್ ಗುಂಡೂರಾವ್ ಮತ್ತು ನರೇಂದ್ರ ಬಾಬು ಅವರು ಫೋರ್ಸಿಬಲ್ ಆಗಿ ಹೋಗಿ ಭಾಷಣವನ್ನು ಮಾಡಿದರು, ನಮಗೆ ಅವಕಾಶವನ್ನು ಮಾಡಿಕೊಡುತ್ತೇವೆಂದು ಹೇಳಿದರು. ಮತ್ತು ನಮ್ಮ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಅವರೂ ಕೂಡ ಸಭೆಯನ್ನು ಕರೆಯುತ್ತೇವೆಂದು ಹೇಳಿದರು. ಮೊನ್ನೆ ಮುಖ್ಯಮಂತ್ರಿಗಳು ಕೂಡ ಸಭೆಯನ್ನು ಕರೆದಿದ್ದರು. ಕಾರಣಾಂತರದಿಂದ ಅದನ್ನು ಅವರು ಕ್ಯಾನ್ಸೆಲ್ ಮಾಡಬೇಕಾಯಿತು. ಜನರ ಆ ಒಂದು ಸಭೆಯಲ್ಲಿ, ನಮ್ಮ ಅಧಿಕಾರಿವರ್ಗದವರು ಈ ಕ್ಯಾಪಿಟಲ್ ವ್ಯಾಲ್ಯು ಸಿಸ್ಟಂ ಅನ್ನು ಮಾಡಬೇಕೆಂದು ಆರ್ಗ್ಯುಮೆಂಟ್ ಮಾಡಿದರು, ಇಡೀ ಸಭೆಯಲ್ಲಿ ಭಾಗವಹಿಸಿದ ಎಲ್ಲಾ ಅಸೋಸಿಯೇಷನ್ಸ್, ಜನರೆಲ್ಲರು ಅದನ್ನು ವಿರೋಧ ಮಾಡಿದಾಗ, ಸನ್ಮಾನ್ಯ ಸಚಿವರಾದ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಮತ್ತು ಅಶೋಕ್ ಅವರು ಆ ಭರವಸೆಯನ್ನು ಕೊಟ್ಟಿದ್ದರು. ನಮ್ಮ ಸಮಿತಿಯಲ್ಲಿ ಇದನ್ನು ಪರಿಶೀಲನೆ ಮಾಡುತ್ತೇವೆ, ಜಾರಿಯಾಗಲು ಬಿಡುವುದಿಲ್ಲವೆನ್ನುವ ರೀತಿಯಲ್ಲಿ ಅವರು ಭರವಸೆಯನ್ನು ಕೊಟ್ಟಿದ್ದರು. ಆದರೆ ಇವತ್ತು ಏನಾಗಿದೆ ಎಂದರೆ, ಜನರು ಏನು ವಿರೋಧ ಮಾಡಿದರು, ಅದನ್ನೇ ಜಾರಿಗೆ ತರುತ್ತಿದ್ದಾರೆ. ಏನು ಕ್ಯಾಪಿಟಲ್ ವ್ಯಾಲ್ಯು ಸಿಸ್ಟಂ? ಇದನ್ನು ಅವರು ಯಾವ ಆಧಾರದ

ಮೇಲೆ ಮಾಡುತ್ತಿದ್ದಾರೆ? ಇದನ್ನು ಗೈಡನ್ಸ್ ವ್ಯಾಲ್ಯೂ ಮೇಲೆ ಮಾಡುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳಿದ್ದಾರೆ, ಏನು ಗೈಡನ್ಸ್ ವ್ಯಾಲ್ಯೂ, ಏನು ಆಸ್ತಿಯ ಒಂದು ಮೌಲ್ಯವನ್ನು ನಿರ್ಧಾರ ಮಾಡುತ್ತೀರೆಂದು ಕೇಳಿದರೆ, ಯಾವಾಗ ವರ್ಗಾವಣೆ ಮಾಡುತ್ತೀರಾ, ಸೇಲ್ ಮಾಡುತ್ತೀರಾ ಆ ಸಂದರ್ಭದಲ್ಲಿ ಒಂದೇ ಸಾರಿ ಕೊಡುವಂಥ ರಿಜಿಸ್ಟ್ರೇಷನ್ ಫೀಗೆ ಈ ಗೈಡನ್ಸ್ ವ್ಯಾಲ್ಯೂ ಮಾಡಿದಂತಾಗಿದೆ. ಇವತ್ತು ತಮಗೆ ಗೊತ್ತಿದೆ ಗೈಡನ್ಸ್ ವ್ಯಾಲ್ಯೂ ಪ್ರಕಾರ, ಬೆಂಗಳೂರಿನ ಆಸ್ತಿಯ ಬೆಲೆ ಜಾಸ್ತಿಯಾಗಿದೆ, ಯಾರು ಆಸ್ತಿಯನ್ನು ಮಾರಾಟ ಮಾಡುತ್ತಾರೆ ಆಗ 13% ರಿಜಿಸ್ಟ್ರೇಷನ್ ಫೀ ಕೊಡುತ್ತಾರೆ. ಆಸ್ತಿ ಮಾರುವಾಗ ಹಣ ಬರುತ್ತದೆಂದು ಅವರು ಕೊಡಲು ಸಿದ್ಧರಿದ್ದಾರೆ. ಆದರೆ ಇವತ್ತು ಏನಾಗಿದೆ, ಇವತ್ತು ಯಾರು ಆಸ್ತಿಯನ್ನು ಮಾರಾಟ ಮಾಡುತ್ತಿಲ್ಲ. ಇವತ್ತು ಆಸ್ತಿ ತೆರಿಗೆ ಫೇರ್ ಆಗಿ ಇರಬೇಕು, ಜನರಿಗೆ ಸಂತೋಷದಿಂದ ಕೊಡುವಂತಾಗಬೇಕೆ ಹೊರತು, ಅದು ಅವರಿಗೆ ಹೊರೆಯಾಗುವಂತಹದ್ದಾಗಬಾರದು. ಈ ಗೈಡನ್ಸ್ ವ್ಯಾಲ್ಯೂಯಿಂದ ಯಾವುದೇ ರೀತಿಯಲ್ಲಿಯು ಕೂಡ ಪ್ರಾಪರ್ಟಿ ವ್ಯಾಲ್ಯೂಗೆ ಅದನ್ನು ಹೋಲಿಕೆ ಮಾಡುವುದಕ್ಕಾಗುವುದಿಲ್ಲ. ಏನು annual rental value ಇದೆ, ಆ ಪ್ರಕಾರ ಇವತ್ತು ಗಳಿಕೆಯಾಗಬೇಕು, ಇನ್‌ಕಂ ಬರಬೇಕು, ಆ ಇನ್‌ಕಂಗೆ ಟ್ಯಾಕ್ಸ್ ಹಾಕಬೇಕೆ ಹೊರತು. ಭೂಮಿಗೆ ಇಷ್ಟೊಂದು ಬೆಲೆ ಇದೆ ಎಂದು ಭೂಮಿ ಮಾರುವವರಿಗೆ ಮಾತ್ರ ಅದರ ಪ್ರಯೋಜನ ಸಿಗುತ್ತದೆಯೇ ಹೊರತು, ಯಾರು ಮಾರುವುದಿಲ್ಲವೋ ಅವರಿಗೆ ನಿಜವಾಗಿಯೂ ಪ್ರಯೋಜನ ಸಿಗುವುದಿಲ್ಲ. ಆದುದರಿಂದ ಈ ಪ್ರಾಪರ್ಟಿ ಟ್ಯಾಕ್ಸ್ ಅನ್ನು ತಂದು ಕಮಿಷನರ್ ಅವರಿಗೆ ಸಂಪೂರ್ಣವಾದ ಅಧಿಕಾರವನ್ನು ಕೊಟ್ಟಿದ್ದಾರೆ. ಬಹುಶಃ ಇದರಷ್ಟು ಅನ್ಯಾಯ ಯಾವುದೂ ಇಲ್ಲ. ಏನು ಕಮಿಷನರ್‌ರವರೆ ಟ್ಯಾಕ್ಸ್ ಹಾಕುವವರು ಅವರೇ collect ಮಾಡುವವರು, ಅವರೇ ಟ್ಯಾಕ್ಸ್ ನಿರ್ಧಾರ ಮಾಡುವುದು ಎಂದರೆ, ಇವತ್ತು ನಿಜವಾಗಿಯು ಬೆಂಗಳೂರಿನ ಜನರಿಗೆ ಅನ್ಯಾಯವಾಗುತ್ತದೆ. ಆದುದರಿಂದ ಈ ಕಾರ್ಪೊರೇಷನ್ ಎಲೆಕ್ಷನ್ ಅನ್ನು ಮಾಡಲು ನಿಜವಾಗಿಯು ತಡಮಾಡುತ್ತಿದ್ದೀರಿ. ಬೇಗ ಮಾಡಬೇಕೆಂದು ಇವತ್ತು ಹೈಕೋರ್ಟಿನಿಂದ ಆದೇಶವಿದೆ. ದಯವಿಟ್ಟು ಕಾರ್ಪೊರೇಷನ್ ಎಲೆಕ್ಷನ್ ಆದಮೇಲೆ ಇದನ್ನು ಜಾರಿಗೆ ತನ್ನಿ. ಈಗ ತಾವು ಯಾವರೀತಿಯಲ್ಲಿ ಈ ಸೆಲ್ಫ್ ಅಸೆಸ್‌ಮೆಂಟ್ ಸ್ಕೀಂನಲ್ಲಿ ಮಾಡುತ್ತಿದ್ದೀರಿ, ಅದನ್ನೇ ಮುಂದುವರೆಸಿ. ಈಗ ಸೆಲ್ಫ್ ಅಸೆಸ್‌ಮೆಂಟ್ ಎಂದು ಗೈಡನ್ಸ್ ವ್ಯಾಲ್ಯೂ ಹಾಕುತ್ತಿದ್ದಾರೆ, ಅದಕ್ಕೆ ನಾವು ವಿರೋಧ ಮಾಡುತ್ತಿರುವುದು. ಇವತ್ತು ಸೆಲ್ಫ್ ಅಸೆಸ್‌ಮೆಂಟ್‌ಗೆ ಗೈಡನ್ಸ್ ವ್ಯಾಲ್ಯೂ ಮಾಡಿದರೆ ಏನು ಸಿವಿಎಸ್ ತಂದಿದ್ದೀರಿ

ಅದರಷ್ಟಾಗುತ್ತದೆ. 100-150% ಇವತ್ತು ಪ್ರಾಪರ್ಟಿ ಟ್ಯಾಕ್ಸ್ ಜಾಸ್ತಿಯಾಗುತ್ತದೆ. ಇನ್ನೊಂದು ವಿಚಾರವೇನೆಂದರೆ, ಸುಮಾರು 22 ಲಕ್ಷ ಪ್ರಾಪರ್ಟಿ ಇವತ್ತು ಬೆಂಗಳೂರಿನಲ್ಲಿದೆ. ಆದರೆ ಇವತ್ತು ಟ್ಯಾಕ್ಸ್ ಹಾಕುವುದು 8 ಲಕ್ಷ ಪ್ರಾಪರ್ಟಿಗೆ. ಕಾರ್ಪೊರೇಷನ್ ಪ್ರಕಾರ 14 ಲಕ್ಷ ಆಸ್ತಿಗಳಿಗೆ ಇವತ್ತು ತೆರಿಗೆ ಹಾಕುತ್ತಿಲ್ಲ. ಈ 14 ಲಕ್ಷ ಆಸ್ತಿಗಳಿಗೆ ತಾವು ತೆರಿಗೆಯನ್ನು ಹಾಕಲು ಜಿಯೊಗ್ರಾಫಿಕಲ್ ಆಗಿ ನೋಡಿಬಿಟ್ಟು ಯಾವ್ಯಾವ ಆಸ್ತಿ, ಮನೆಗಳಿಗಳಿವೆ ಎಂದು GPS ನಿಂದ ಗುರುತಿಸಬಹುದು, ಆದುದರಿಂದ ಆ system ಅನ್ನು ದಯವಿಟ್ಟು ಉಪಯೋಗಿಸಿಕೊಳ್ಳಿ. ಇವತ್ತು RTO ಹತ್ತಿರ ರೆಕಾರ್ಡ್ ಇದೆ, Income Tax ಹತ್ತಿರ ರೆಕಾರ್ಡ್ ಇದೆ, Bescom ಹತ್ತಿರ ರೆಕಾರ್ಡ್ ಇದೆ.

ಬೆಸ್ಕಾಂ ಹತ್ತಿರ ರೆಕಾರ್ಡ್ ಇದೆ, ಪ್ರತಿಯೊಬ್ಬರಲ್ಲಿ ರೆಕಾರ್ಡ್ ಇದೆ. ಅದನ್ನು ತೆಗೆದುಕೊಂಡು ಕಂಪ್ಯೂಟರ್‌ನಲ್ಲಿ ಹಾಕಿ ಎಷ್ಟು ಮನೆಗಳು ಇವೆ ಎಷ್ಟು ಆಸ್ತಿಗಳು ಇವೆ ಎಂದು ಸುಲಭವಾಗಿ ಗುರುತಿಸಬಹುದು. ಎಲ್ಲಾ ಆಸ್ತಿಗಳಿಗೆ ತೆರಿಗೆ ಹಾಕಿ. ತೆರಿಗೆ ಯಾರು ಕಟ್ಟುತ್ತಿದ್ದಾರೆ ಅವರಿಗೆ ಹೆಚ್ಚು ಹೊರೆ ಹಾಕುವ ಕೆಲಸ ಮಾಡಬೇಡಿ. ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. IT-BT ಸಂಸ್ಥೆಗಳು global recession ನಿಂದ ತುಂಬ ಕಷ್ಟವನ್ನು ಎದುರಿಸುತ್ತಿದ್ದಾರೆ. ಲಕ್ಷಾಂತರ ಜನ ಉದ್ಯೋಗವಕಾಶ ಇದೆ. ತಮಗೆ ಗೊತ್ತಿದೆ ಹಲವಾರು IT-BT ಸಂಸ್ಥೆಗಳು ಮುಚ್ಚುತ್ತಿವೆ. ಮಾನ್ಯ ಶಾಸಕರಾದ ಸಿ.ಟಿ. ರವಿರವರು ಹೇಳಿದರು. ಚಿನ್ನದ ಮೊಟ್ಟೆ ಇಡುವ ಕೋಳಿಯನ್ನು ಕೊಂದು ಒಂದೇ ಸಾರಿ ಮೊಟ್ಟೆ ತೆಗೆಯುವುದಕ್ಕೆ ಹೋಗಬೇಡಿ. ನಮ್ಮಲ್ಲಿ ಬಡವರಿದ್ದಾರೆ ಸ್ಲಂ ನಲ್ಲಿ ಇದ್ದಾರೆ ಇದುವರೆಗೆ ಸ್ಲಂಗಳಿಗೆ ಪ್ರಾಪರ್ಟಿ ಟ್ಯಾಕ್ಸ್ ಹಾಕುತ್ತಿರಲಿಲ್ಲ. ಆ ಸ್ಲಂನಲ್ಲಿ ಬೇಸಿಕ್ ಎಮಿನಿಟೀಸ್ ಏನೂ ಇಲ್ಲ. ನೀರು ಇಲ್ಲ, ಕೊಳಚೆ ನೀರುವ ಹೋಗುವ ಚರಂಡಿ ಇಲ್ಲ, ಲೈಟ್ ಇಲ್ಲ ಏನೂ ಇಲ್ಲಇವರಿಗೆ ಪ್ರಾಪರ್ಟಿ ಟ್ಯಾಕ್ಸ್ ಹಾಕುವ ನಿರ್ಧಾರ ತೆಗೆದುಕೊಂಡಿದ್ದೀರಿ. ದಯವಿಟ್ಟು ಈ ತರಹ ನೀವು ಯಾರಿಗೋ ಒಬ್ಬರಿಗೆ ಅಧಿಕಾರ ಕೊಡಬೇಡಿ. ದಯವಿಟ್ಟು ಮುಂದೆ ಬರುವ ಮಹಾನಗರ ಚುನಾವಣೆ ಆದ ಮೇಲೆ ಕಾರ್ಪೋರೇಟರ್ಸ್ ಇರುತ್ತಾರೆ. ಅವರ ಜೊತೆ ಡಿಸ್ಕಸ್ ಮಾಡಿ ಇದನ್ನು ಜಾರಿಗೆ ತರಬೇಕೆಂದು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಕೇಳಿಕೊಳ್ಳುತ್ತೇನೆ.

ಶ್ರೀ ನೆ.ಲ. ನರೇಂದ್ರ ಬಾಬು (ಮಹಾಲಕ್ಷ್ಮಿ ಲೇಔಟ್) :- ಮಾನ್ಯ ಅಧ್ಯಕ್ಷರೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಏನು ಇವತ್ತು ತರಲಿಕ್ಕೆ

ಹೊರಟಿದ್ದಾರೆ ಅದರಿಂದ ನಿಜವಾಗಿಯೂ ಬಹಳ ನೋವಾಗುತ್ತದೆ. ಏಕೆಂದರೆ ಮಹಾ ನಗರ ಏಕೆಂದರೆ ಬೆಂಗಳೂರು ಮಹಾ ನಗರ ಪಾಲಿಕೆ ತೆರಿಗೆ ಮತ್ತು ಸ್ಥಾಯಿ ಸಮಿತಿಯ ಅಧ್ಯಕ್ಷನಾಗಿ ಕೆಲಸ ಮಾಡಿದವನು. ನಾನು ಆ ಸಂದರ್ಭದಲ್ಲಿ ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿಯನ್ನು ತರುವುದರ ಮುಖೇನ ಬೆಂಗಳೂರು ಮಹಾ ನಗರ ವ್ಯಾಪ್ತಿಯಲ್ಲಿ ಹಿಂದೆ 90 ಕೋಟಿ ರೂ. ಏನು ಕಂದಾಯ ಬರುತ್ತಿತ್ತು, ತದ ನಂತರ ಹಂತ ಹಂತವಾಗಿ ಸುಮಾರು 150 ರಿಂದ 200 ಕೋಟಿ ರೂ. ಕಂದಾಯ ಬರುವ ರೀತಿಯಲ್ಲಿ ಮಾರ್ಪಾಡು ಮಾಡಲಿಕ್ಕೆ ಸಾಧ್ಯವಾಯಿತು. ಅದಕ್ಕೆ ಕಾರಣವೇನೆಂದರೆ, ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿಯನ್ನು ಕಾಂಗ್ರೆಸ್ ಸರ್ಕಾರದ ನೇತೃತ್ವದಲ್ಲಿ ತಂದೆವು. ಬಹುಶಃ ನಿಮಗೆ ಆಶ್ಚರ್ಯವಾಗಬಹುದು. ಜನ ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿಯನ್ನು ತಂದಾಗ ಕೆಲವರು ಪ್ರತಿಭಟನೆ ಮಾಡಿದರು. ಕೆಲವರು ಯೋಚನೆ ಮಾಡಿ ಸ್ವತಃ ಅವರೇ ಡಿಕ್ಲೇರ್ ಮಾಡಿಕೊಳ್ಳಲಿಕ್ಕೆ ಪ್ರಾರಂಭ ಮಾಡಿದರು. ಅದಕ್ಕೆ ಕಾರಣವೇನೆಂದರೆ, ಬೆಂಗಳೂರು ಮಹಾನಗರದಲ್ಲಿ ಪ್ರತಿಯೊಬ್ಬ ಆಸ್ತಿ ತೆರಿಗೆದಾರನೂ ಸಹ ಒಬ್ಬ ರೆವಿನ್ಯೂ ಇನ್ಸ್‌ಪೆಕ್ಟರ್ ಅಥವಾ ಟ್ಯಾಕ್ಸ್ ಇನ್ಸ್‌ಪೆಕ್ಟರ್, ಅಸೆಸರ್ ಅಥವಾ ಬೆಂಗಳೂರು ಮಹಾನಗರ ಪಾಲಿಕೆಯ ಕಂದಾಯ ಇಲಾಖೆಯ ಅಧಿಕಾರಿಗಳ ಮರ್ಜಿಯಲ್ಲಿ ಕೆಲಸ ಮಾಡಿ ಆಸ್ತಿಗಳನ್ನು ಘೋಷಣೆ ಮಾಡಬೇಕಾಗಿದೆ. ಒಂದು ಆಸ್ತಿಗೆ 5,000 ರೂ. ಇದ್ದರೆ ಪಕ್ಕದ ಆಸ್ತಿಗೆ ಅದೇ ವ್ಯಾಪ್ತಿಯಲ್ಲಿ ಇರತಕ್ಕಂಥದ್ದು 2,000 ರೂ. ಇತ್ತು. ಇದನ್ನೆಲ್ಲಾ ಪರಿಗಣಿಸಿ ಹೇಗಾದರೂ ಮಾಡಿ ತಮ್ಮ ಆಸ್ತಿಗಳನ್ನು ಹೇಗೆ ವರಮಾನವನ್ನು Income Tax ನಲ್ಲಿ ಡಿಕ್ಲೇರ್ ಮಾಡುವುದಕ್ಕೆ ಹೇಗೆ ಸಾಧ್ಯ ಇದೆಯೋ ಅದೇ ರೀತಿ ಒಂದು ಪದ್ಧತಿಯನ್ನು ತಂದೆವು. ಆದರೆ ತದ ನಂತರ ಒಬ್ಬರು ಇದು ಕಾನೂನು ಬಾಹಿರ ಎಂದು ಕೋರ್ಟಿಗೆ ಹೋದಾಗ ಇದನ್ನು ಅಧಿಕೃತವಾಗಿ ತರಬೇಕೆನ್ನುವ ತೀರ್ಮಾನವನ್ನು ಸರ್ಕಾರ ಮಾಡಿತು. ಇವತ್ತು ಬೆಂಗಳೂರು ನಗರ ಏನಾಗಿದೆ ಎಂದರೆ, ನಿವೃತ್ತರ ಸ್ವರ್ಗ ಎಂದು ಹೇಳುತ್ತಾರೆ. Retired men's paradise ಎಂದು ಹೇಳುತ್ತಾರೆ. ಇವತ್ತು ನಿಜವಾಗಿ ಹೇಳುತ್ತೇನೆ, ನಿವೃತ್ತರ ಸ್ವರ್ಗ ಅಲ್ಲ, ನಿವೃತ್ತರ ನರಕ ಆಗಿ ಹೋಗಿದೆ. ಏಕೆಂದರೆ ಇವತ್ತು ಯಾವುದೇ ನಿವೃತ್ತರು ತಮ್ಮ ಪೆನ್‌ಷನ್ ದುಡ್ಡಿನಲ್ಲಿ ಟ್ಯಾಕ್ಸ್ ಕಟ್ಟುತ್ತಾರೋ, ಔಷಧಿ ತೆಗೆದುಕೊಳ್ಳುತ್ತಾರೋ, ಜೀವನೋಪಾಯ ಮಾಡುತ್ತಾರೋ ಎಂದು ಬಹಳ ಕಳವಳಕಾರಿ ಬೆಳವಣಿಗೆ ಆಗಿದೆ. ಉದಾಹರಣೆಗೆ ಹೇಳುತ್ತೇನೆ. ಹಿಂದೆ ಡಿ-ಜೋನ್‌ನಲ್ಲಿ ನೋಟಿಫಿಕೇಷನ್ ಮಾಡಿ ಅಬ್ಜೆಕ್ಷನ್ ಕಾಲ್ ಫಾರ್ ಮಾಡಿದಾಗ ನಾವು ನೋಡಿದೆವು.

ಮಲ್ಲೇಶ್ವರಂ ಡಿ- ಜೋನ್‌ನಲ್ಲಿತ್ತು. ಅದು ಎ ಜೋನ್‌ಗೆ ಬಂಧಿದೆ. ಇದು ನಮಗೆ ಆಶ್ಚರ್ಯವಾಗುತ್ತದೆ. M.G. Road ರೇಟ್ ಮಲ್ಲೇಶ್ವರಂ ಗೆ ತಂದಿದ್ದಾರೆ. ಒಬ್ಬರು ನಿವೃತ್ತರಾಗಿರುವವರ ಮನೆಯ ಪಕ್ಕದಲ್ಲಿ ಒಂದು ಮಾಲ್ ಬಂದರೆ, ನಿವೃತ್ತನಾದವನು ಮಾಲ್ ರೇಟ್ ಕಟ್ಟಬೇಕು. ಬೆಂಗಳೂರಿನ ಸ್ಥಿತಿ ಯಾವ ರೀತಿ ಆಗಿದೆ ನೋಡಿ. ಬೆಂಗಳೂರು ಲಿವಬಲ್ ಸಿಟಿ ಆಗುತ್ತಿಲ್ಲ. ಅಫೋರ್ಡಬಲ್ ಸಿಟಿ ಆಗುತ್ತಿಲ್ಲ. ಸಾಮಾನ್ಯ ಜನ ವಾಸ ಮಾಡತಕ್ಕಂತಹ ಸಿಟಿ ಅಲ್ಲ. Costly city ಮಾಡಲಿಕ್ಕೆ ಹೊರಟಿದ್ದೀರಿ. ಆಕ್ಟ್ರಾಯ್ ಸಿಸ್ಟಮ್ ಹೋದ ನಂತರ ಆಸ್ತಿ ತೆರಿಗೆ ಮೂಲಕವೇ ಸಂಪೂರ್ಣ ಸಂಪನ್ಮೂಲ ಕ್ರೂಡೀಕರಣ ಮಾಡುವುದಕ್ಕೆ ಹೊರಟಿರತಕ್ಕಂಥದ್ದು ಆಘಾತಕಾರಿ ವಿಷಯ ಎಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುತ್ತೇನೆ. ಖಂಡಿತವಾಗಿ ಬೆಂಗಳೂರು ಮಹಾ ನಗರದ ಜನ ಸುಮಾರು 10 ತಿಂಗಳುಗಳಿಂದ ನಾವು ಟ್ಯಾಕ್ಸ್ ಕಟ್ಟಲಿಲ್ಲವೆಂದು ಪರಿತಪಿಸುತ್ತಿದ್ದಾರೆ. ಹಳೆಯ ಪದ್ಧತಿಯಲ್ಲಿ ಕಟ್ಟುತ್ತೇವೆಂದರೆ ಬೇಡ ಎಂದು ಹೇಳಿ ನಮ್ಮ ಅಧಿಕಾರಿಗಳ ಮಾತುಗಳನ್ನು ಕಟ್ಟಿಕೊಂಡು ಜನ ಟ್ಯಾಕ್ಸ್ ಕಟ್ಟುತ್ತೇವೆಂದರೂ ಸಹ ಕಟ್ಟಿಸಿಕೊಳ್ಳದೆ, ನೂತನ ಪದ್ಧತಿ ತರುವುದಕ್ಕೆ ಹೊರಟು ಈ ಕಂದಾಯ ಮುಖೇನ ಎರಡು ಎರಡೂವರೆ ಪಟ್ಟು ಜಾಸ್ತಿಯಾಗುತ್ತಿದೆ ಎನ್ನತಕ್ಕಂತಹ ಮಾತನ್ನು ಹೇಳಲಿಕ್ಕೆ ಬಯಸುತ್ತೇನೆ. ನಾನು ಮೊನ್ನೆ ಅಧಿಕಾರಿಗಳ ಜೊತೆ ಮಾತನಾಡಿದೆ. ಡಿಪ್ರಿಸಿಯೇಷನ್ ನಾವು ಹಿಂದೆ 2000ದಲ್ಲಿ ಮಾಡಿದಂತಹ ಟ್ಯಾಬ್ಯುಲೇಷನ್ ಏಕೆ ವೇರಿ ಮಾಡುತ್ತೀರಿ ಎಂದು ಕೇಳಿದೆ. ಇಲ್ಲ ಬದಲಾವಣೆ ಮಾಡುವುದಕ್ಕಾಗುವುದಿಲ್ಲ, ನಾವು ಒಂದೊಂದು ನಗರಕ್ಕೆ ಒದೊಂದು ತಾರತಮ್ಯ ಮಾಡಿದ ಹಾಗಾಗುತ್ತದೆ. 0 ಯಿಂದ 5 ರವರೆಗೆ ಮೊದಲು 10% ಕೊಡುತ್ತಿದ್ದರು. ಈಗ 3% ಮಾಡಿದ್ದಾರೆ. 10% ಎಲ್ಲಿ? 3% ಎಲ್ಲಿ? 7% ವ್ಯತ್ಯಾಸವಾಯಿತು. 2000ದಲ್ಲಿ 6 ರಿಂದ 10 ರವರೆಗೆ ಕೊಡುತ್ತಿದ್ದೆವು. ಇವತ್ತು ಡಿಪ್ರಿಸಿಯೇಷನ್ 6% ಕೊಡುತ್ತಾರೆ. 9% ಎನ್‌ಹಾನ್ಸ್ ಆಯಿತು. ಹೀಗೇ ನೋಡುತ್ತಾ ಹೋದರೆ ಹೇಗೆ it is a hidden effect on the tax payers. Tax payers ಮೇಲೆ ಒಳ್ಳೆಯ ಗುಪ್ತಗಾಮಿನಿಯಾಗಿ ಟ್ಯಾಕ್ಸ್ ಹೊರೆ ಆಗತಕ್ಕಥದ್ದು. ನಮ್ಮ ಅಧಿಕಾರ ವ್ಯಾಪ್ತಿ ಇರತಕ್ಕಂಥದ್ದು ಯಾವುದೇ ಅಪೀಲು ಬಂದಾಗ ಅಪೀಲು ಕಮಿಟಿ ಇರುತ್ತಿತ್ತು. ಅಪೀಲ್ ಮಾಡತಕ್ಕಂತಹ ಪವರ್ ಜನಪ್ರತಿನಿಧಿಗಳಿಗೆ ಇತ್ತು. ಸಂವಿಧಾನ ತಿದ್ದುಪಡಿ 73, 74 ರ ಪ್ರಕಾರವಾಗಿ ಇವತ್ತು ಖಂಡಿತವಾಗಿ ಜನ ಪ್ರತಿನಿಧಿಗಳು ಇಲ್ಲ. ಜನಪ್ರತಿನಿಧಿಗಳು ಇಲ್ಲಿ ಇಲ್ಲ. Actನಲ್ಲಿ ಇದು ಅಮೆಂಡ್‌ಮೆಂಟ್

ಆಗಬೇಕಾಗಿದೆ. ಪ್ರತಿ ಐದು ವರ್ಷಕ್ಕೆ ಒಂದು ಸಾರಿ ರಿವೈಸ್ ಮಾಡಬೇಕೆಂದು ಇದೆ, ಅದನ್ನು ಮೂರು ವರ್ಷಕ್ಕೆ ಒಂದು ಸಾರಿ ರಿವೈಸ್ ಮಾಡಬೇಕು. ಒಬ್ಬ ಸಾಮಾನ್ಯ ಜನರಿಗೆ ನೆತ್ತಿಗೆ ಒಂದು ಕುಡಿಯುವ ನೀರು, ನೆತ್ತಿಗೆ ಒಂದು ಸೂರು ಎಂದು ಹೇಳುತ್ತಾರೆ. ಪ್ರತಿಯೊಂದು ಮನೆಗೂ ಸಹ ಐದು ವರ್ಷಕ್ಕೆ ಒಂದು ಸಾರಿ ಅವನ ಇನ್‌ಕಮ್ ಜಾಸ್ತಿಯಾಗುತ್ತಾ ಹೋಗುತ್ತದೆಯಾ? ಎಲ್ಲೋ ಒಂದು ಕಡೆ ಯಾವುದೋ ಒಂದು ಗಣಿ ಮಾಡುವವರಿಗೆ ರಿಯಲ್ ಎಸ್ಟೇಟ್ ಬಿಸ್‌ನೆಸ್ ಮಾಡುವವರಿಗೆ, ಅಥವಾ ಯಾವುದೋ ದೊಡ್ಡ ದೊಡ್ಡ institutions ಇಟ್ಟುಕೊಂಡಿರುವವರಿಗೆ ವರಮಾನ ಬರುತ್ತದೆ. ಮಧ್ಯಮ ವರ್ಗದವರಿಗೆ ದುಡಿಯತಕ್ಕಂತಹ ವರ್ಗದವರಿಗೆ ಖಂಡಿತ ಇನ್‌ಕಮ್ ಜಾಸ್ತಿಯಾಗುವುದಿಲ್ಲ. ಕುಟುಂಬದಲ್ಲಿ ಹೊರೆ ಆಗುತ್ತದೆ. ಇವತ್ತಿನ ಈ ಪದ್ಧತಿ ಮುಖೇನ ಜನ ಪ್ರತಿನಿಧಿಗಳು ಬರುವವರೆಗೆ ಹಿಂದಿನ ಪದ್ಧತಿಯನ್ನೇ ತಾವು ಇಟ್ಟುಕೊಳ್ಳಬೇಕು. ಈ ಪದ್ಧತಿಯಿಂದ ಹೊರೆ ಮಾಡಬಾರದು. ಮತ್ತೆ ಇನ್ಸ್ಪೆಕ್ಟರ್ ರಾಜ್‌ಗೆ ಅವಕಾಶ ಕೊಡಬಾರದು ಎಂದು ಹೇಳಿ ನಾನು ಕಳಕಳಿಯಿಂದ ವಿನಂತಿ ಮಾಡುತ್ತೇನೆ. ಮೊನ್ನೆ ಸನ್ಮಾನ್ಯ ಮುಖ್ಯಮಂತ್ರಿಗಳು ಒಂದು ಸಭೆಯನ್ನು ಕರೆದರು. ಆವತ್ತು ರಾತ್ರಿ ಸಭೆ ಮುಂದೂಡಿ ಮತ್ತೆ ಸಧ್ಯದಲ್ಲಿಯೇ ಸಭೆ ಕರೆಯುತ್ತೇವೆಂದು ಹೇಳಿದರು. ನಾವು ಇಲ್ಲಿ ಹೈಲೈಟ್ ಮಾಡಬೇಕಾಗಿತ್ತು, ಎನ್‌ಲೈಟನ್ ಮಾಡ ಬೇಕಾಗಿತ್ತು. ಬೆಂಗಳೂರು ಮಹಾ ನಗರದಲ್ಲಿ ಇರತಕ್ಕಂತಹ 28 ಶಾಸಕರ ಮೇಲೆ ಎಷ್ಟು ದುಷ್ಪರಿಣಾಮ ಬೀರುತ್ತದೆ? ನಾವು ಜನಗಳನ್ನು ಯಾವ ರೀತಿಯಾಗಿ ಫೇಸ್ ಮಾಡಬೇಕಾಗುತ್ತದೆ? ನಂದಿನಿ ಲೇಔಟ್ ಬಗ್ಗೆ ನಿನ್ನೆ ರಾತ್ರಿ ಲೆಕ್ಕ ಹಾಕಿಕೊಂಡು ಕುಳಿತಿದ್ದೆ. 2000 ರೂ. ಟ್ಯಾಕ್ಸ್ ಬರುತ್ತಿದ್ದುದು ಇದೇ ಲೆಕ್ಕ ಹಾಕಿದಾಗ ಒಂದು ಫ್ಲಾಟ್‌ಗೆ ಸುಮಾರು 5,000 ಆಗುತ್ತದೆ. ಬೆಂಗಳೂರು ನಂದಿನಿ ಲೇಔಟ್ ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುತ್ತದೆ. ಅಂತಹ ಬಡಾವಣೆಯಲ್ಲಿ ಆ ರೀತಿ ಆದಾಗ ಬೇರೆ ಯಾವ ರೀತಿ ಪರಿಣಾಮ ಬೀರುತ್ತದೆ? ಕಮರ್ಷಿಯಲ್ ಬಗ್ಗೆ ನಾನು ಮಾತನಾಡುತ್ತಿಲ್ಲ. ಕಮರ್ಷಿಯಲ್‌ಗೆ ಹೋದರೆ 4 ಪಟ್ಟು 5 ಪಟ್ಟು ಹೆಚ್ಚಿಗೆ ಆಗುತ್ತದೆ. ನಾನು ಫ್ಲಾಟ್ ಹೇಗೆ ದುಬಾರಿ ಯಾಗುತ್ತದೆ ಎನ್ನುವುದಕ್ಕೆ ಡಾ॥ ಸುಧಾಕರ್‌ರವರ ಬಿಲ್ಡಿಂಗ್ ಲೆಕ್ಕ ಹಾಕಿದೆ. ಖಂಡಿತ ಇದು ನಿಮ್ಮ ವಿರುದ್ಧ BJP ಇವತ್ತು ನೇತೃತ್ವದಲ್ಲಿದೆ ಎನ್ನುವ ದಿಕ್ಕಿನಲ್ಲಿ ನಿಮ್ಮ ವಿರುದ್ಧ ತಿರುಗಿ ಬೀಳುತ್ತದೆ. ಹಿಂದಿನ ರೇಟ್ ಬಗ್ಗೆ ಪ್ರತಿಯೊಂದು ವಿಧಾನಸಭಾ ಕ್ಷೇತ್ರದಲ್ಲಿ ಜನ ಪ್ರತಿನಿಧಿಗಳ ಸಭೆ ಕರೆಯುತ್ತೇವೆಂದು ಹೇಳಿ ಟೌನ್ ಹಾಲ್‌ನಲ್ಲಿ ನಡೆದಂತಹ ಸಭೆಯಲ್ಲಿ ಹೇಳಿದಿರಿ. ಆ ಮೇಲೆ ಮೀಟಿಂಗ್ ಕರೆಯಲೇ

ಇಲ್ಲ. ಗ್ರಾಸ್ ರೂಟ್ ಲೆವಲ್‌ನಲ್ಲಿ ವರ್ಕ್ ಮಾಡತಕ್ಕಂತಹವರಿಗೆ, ಫೇಸ್ ಮಾಡತಕ್ಕಂತಹವರಿಗೆ ಅದರ ನೋವು ಗೊತ್ತಾಗುತ್ತದೆ. ಅವರ ಬವಣೆ ಗೊತ್ತಾಗುತ್ತದೆ. ದಯವಿಟ್ಟು ಈ ಪದ್ಧತಿಯನ್ನು ಜನಗಳ ಮೇಲೆ ಹೇರಬೇಡಿ. ಬೆಂಗಳೂರಿನ ಸುತ್ತ ಮುತ್ತ ವಿಲ್ಲಾಗಳು ಹುಟ್ಟುತ್ತಿವೆ. ಅರ್ಧ ಎಕರೆ ಮತ್ತು ಕಾಲು ಎಕರೆಗಳಲ್ಲಿ ವಿಲ್ಲಾಗಳನ್ನು ಕಟ್ಟಿದ್ದಾರೆ. ಅವುಗಳಿಗೆ ಕಡಿಮೆ ಆಗುತ್ತವೆ. ಗ್ರಾಮ ಠಾಣ ಎಂದು ಹೇಳುತ್ತೀರಿ. ಗ್ರಾಮ ಠಾಣ ಎಂದರೆ ಏನು? ಹಳ್ಳಿಗಳಲ್ಲಿರತಕ್ಕಂತಹ ಮನೆಗಳಲ್ಲ. ಏಕೆಂದರೆ ನಾವು ವಿಲೇಜ್ ಎಂದು ಡಿಫೈನ್ ಮಾಡಿಲ್ಲ. ಹೀಗಾಗಿ ಅವರಿಗೆ CMC ಯಲ್ಲಿ ಹಿಂದೆ ಕಟ್ಟುತ್ತಿದ್ದ ಟ್ಯಾಕ್ಸ್‌ಗಿಂತ ಕಡಿಮೆ ಆಗುತ್ತದೆ. ಬೆಂಗಳೂರು ನಗರದಲ್ಲಿ ಜಾಸ್ತಿಯಾಗುತ್ತದೆ. ದಯವಿಟ್ಟು ಇದನ್ನು ನೀವು ಮತ್ತೆ ಯೋಚನೆ ಮಾಡಬೇಕು. Every year ಅನ್ನುವುದು, it is too frequent. It must be more than five years ಆಗಬೇಕು. ಮತ್ತೆ ಬೆಂಗಳೂರಿನ ಕಂದಾಯ ಪಾವತಿದಾರರು ಗೊಂದಲಕ್ಕೆ ಈಡಾಗುತ್ತಾರೆ. ಯಾವಾಗಲೂ ಕಲೆಕ್ಟಿವ್ ವಿಸ್ಡಂ ಬಹಳ ಮುಖ್ಯ. ಡಿಸಿಷನ್ ತೆಗೆದುಕೊಳ್ಳುವಾಗ ಕಲೆಕ್ಟಿವ್ ವಿಸ್ಡಂ ಇದ್ದಾಗ ಇವತ್ತು ಕೌನ್ಸಿಲರ್ಸ್ ಇಲ್ಲ, ಕೌನ್ಸಲರ್ಸ್ ಇಲ್ಲದೆ ಇದ್ದಾಗ ಕಮಿಷನರ್ಸ್ ಗೆ ಅಧಿಕಾರ ಕೊಟ್ಟಿದ್ದೀರಿ. ಕಮಿಟಿಯಿಂದ ಕಮಿಷನರ್ಸ್‌ಗೆ ಪವರ್ ಎನ್‌ಹಾನ್ಸ್ ಮಾಡಿದ್ದೀರಿ. ಅವರು ಏನು ಮಾಡುತ್ತಾರೆ, ಡೆಲಿಗೇಷನ್ ಆಫ್ ಪವರ್ಸ್ ಎಂದು ಹೇಳಿ ಒಬ್ಬ ಅಸೆಸರ್ ಗೋ RO ಗೋ DRO ಗೋ ಹೀಗೆ ಡೆಸಿಗ್ನೇಟ್ ಮಾಡುತ್ತಾರೆ. ಕಂದಾಯ ಪಾವತಿ ಮಾಡತಕ್ಕಂಥವನು ಮತ್ತೆ ಅವನ ಕ್ಲಚ್‌ಸ್‌ಗೆ ಹೋಗಬೇಕಾಗುತ್ತದೆ. ಇನ್ನು ಪಾರ್ಕಿಂಗ್ ಸಂಬಂಧಪಟ್ಟ ಹಾಗೆ ನಾನು ಹೇಳುತ್ತಾ ಹೋದರೆ, ರೂಲ್ಸ್‌ನಲ್ಲಿ ಸರಿ ಮಾಡುತ್ತೇವೆಂದು ಹೇಳುತ್ತಾರೆ. ಖಂಡಿತವಾಗಿ ಕೆಲವು ಕಡೆ ಡಬಲ್ ಜಂಪ್ಸ್ ಆಗಿದೆ. ಡಿ-ಜೋನ್ ಇದ್ದುದು ಸಿ-ಜೋನ್ ಬಂದಿದೆ. ಎಫ್ -ಜೋನ್ ಇದ್ದುದು ಡಿ-ಜೋನ್ ಬಂದಿದೆ. ಜೋನ್‌ಗಳು ಮಾಡಿರತಕ್ಕಂಥದ್ದು ಜಾಸ್ತಿ ಇದೆ. ಬಹುಶಃ ನಗರ ಪ್ರದೇಶದಲ್ಲಿ ವಾಸವಾಗಿರತಕ್ಕಂತಹವರು ಬಹಳ ಜನ ಅಧಿಕಾರಿಗಳು ಮತ್ತು ಬಹಳ ಜನ ಶಾಸಕರು ಬೆಂಗಳೂರು ನಗರದಲ್ಲಿ ಅವರ ಮನೆಗಳು ಅಥವಾ ಸಂಬಂಧಿಗಳ ಮನೆಗಳು ಇರುತ್ತವೆ. ಟ್ಯಾಕ್ಸ್ ಬಿಲ್ ಬಂದಾಗ ಗೊತ್ತಾಗುತ್ತದೆ. ಬೆಂಗಳೂರು ನಿವೃತ್ತರ ಸ್ವರ್ಗವಾಗಿ ಉಳಿಯಲಿ. ಶೋಷಣೆ ಮಾಡತಕ್ಕಂತಹ ಇಂತಹ ಜನ ವಿರೋಧಿ ಕಾನೂನನ್ನು ಜಾರಿ ಮಾಡಿ ದಯವಿಟ್ಟು ಹೊರೆಯನ್ನು ಹೊರಿಸಬೇಡಿ. ಜನಪರವಾಗಿರತಕ್ಕಂತಹ ಒಂದು

ಹೊರೆಯನ್ನು ಇಳಿಸತಕ್ಕಂತಹ ಅಫೋರ್ಡಬಲ್ ಇರಬೇಕು. ಮೋಡಗಳು ಹೇಗೆ ಮಳೆ ನೀರನ್ನು ಹೀರುತ್ತವೆ, ಹಾಗೆ ಹೆಚ್ಚು ಟ್ಯಾಕ್ಸ್ ಬರುವಂತಹ ಕಡೆ ಜಾಸ್ತಿ ತೆಗೆದು ಕೊಡಿ.

ಇದನ್ನು ಬೇರೆ ಕಡೆ ವಿತರಣೆ ಮಾಡಬೇಕು. ಹಸು ಹಾಲು ಕೊಡುತ್ತದೆ ಎಂದು ಹೇಳಿ ಹಾಲನ್ನು ಮಾತ್ರ ಕರೆದುಕೊಳ್ಳಬೇಕೇ ವಿನಃ ರಕ್ತವನ್ನು ಕರೆದುಕೊಳ್ಳಬಾರದು. ಬೆಂಗಳೂರು ನಗರದಲ್ಲಿ ಜನ ಸಾಮಾನ್ಯರಿಗೆ ಹಿಂದೆ ಬಹುಶ: ಆಕ್ಟ್ರಾಯ್ ಇದ್ದಾಗ ಈ ರೀತಿ ಪ್ರಾಬ್ಲಂ ಇರಲಿಲ್ಲ. ಬಾಂಬೆಯಲ್ಲೋ, ಗುಜರಾತ್‌ನಲ್ಲಿಯೋ ಇರುವಂತೆ ಆಕ್ಟ್ರಾಯ್ ಇದ್ದಿದ್ದರೆ ಪ್ರಾಬ್ಲಂ ಇರುತ್ತಿರಲಿಲ್ಲ. ಬೆಂಗಳೂರಿನಲ್ಲಿ ಅದೇ ಹರಿಶ್ಚಂದ್ರ ಘಾಟ್‌ನಲ್ಲಿ ಶ್ರೀಮಂತರಿಗೂ ಕೊಡುತ್ತೀರಿ ಮತ್ತು ಬಡವರಿಗೂ ಕೊಡುತ್ತೀರಿ. ಶ್ರೀಮಂತರು ಮತ್ತು ಬಡವರು ಅದೇ ರಸ್ತೆಯಲ್ಲಿಯೇ ಓಡಾಡಬೇಕು. ಎಲ್ಲರಿಗೂ ಒಂದೇ ರೀತಿಯ ಸೌಲಭ್ಯ ಕೊಡುತ್ತೇವೆ. ಆದರೆ ಒಂದು ವಿಷಯವನ್ನು ನಾನು ಹೇಳುವುದೇನೆಂದರೆ, ವಾಸ ಮಾಡತಕ್ಕಂಥ ಮನೆಗಳಿಗೆ ಈ ರೀತಿಯಾಗಿ ಹೊರೆ ಹೊರಿಸುವುದು ಸರಿಯಲ್ಲ. ಬಾಡಿಗೆಗೆ ಮನೆ ಕೊಟ್ಟ ತಕ್ಷಣ ತೆರಿಗೆ ಜಾಸ್ತಿ ಮಾಡತಕ್ಕಂಥದ್ದಲ್ಲ. ಬೆಂಗಳೂರು ನಗರದಲ್ಲಿ ಅನಿವಾರ್ಯವಾಗಿ ಫ್ಲಾಟ್‌ಗಳಲ್ಲಿ ಇರಬೇಕಾಗುತ್ತದೆ. ಅನಿವಾರ್ಯವಾಗಿ ಬಾಡಿಗೆ ಮನೆಗಳಲ್ಲಿ ಇರಬೇಕಾಗುತ್ತದೆ. ಆದುದರಿಂದ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ನಾನು ವಿನಂತಿಸುವುದೇನೆಂದರೆ, ದಯವಿಟ್ಟು 20+20, almost 60%, almost 3 times ಜಾಸ್ತಿಯಾಗತಕ್ಕಂಥದ್ದು ಇದೆ. ಬಹುಶಃ ಇಲ್ಲಿ work out ಮಾಡಿರತಕ್ಕಂಥದ್ದರ ಬಗ್ಗೆ ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಬಹುಶಃ ಅದನ್ನು ಹೆಚ್ಚು ಲಂಬಿಸಬೇಡಿ. ನಾನು ಇದರ ಬಗ್ಗೆ statistics ಅನ್ನು ಆವೊತ್ತು ನಡೆದ ಮೀಟಿಂಗ್‌ನಲ್ಲಿ ಕೊಡಬೇಕೆಂದುಕೊಂಡಿದ್ದೆ. ಆದರೆ ಆವೊತ್ತು ನನಗೆ ಅವಕಾಶ ಸಿಗಲಿಲ್ಲ. ತರಾತುರಿಯಲ್ಲಿ ವಿಧೇಯಕವನ್ನು ತರುತ್ತಿದ್ದೀರಿ. ಕಳೆದ ಬಾರಿ ಅಕ್ರಮ-ಸಕ್ರಮ ವಿಷಯದಲ್ಲಿಯೂ ಕೂಡ ಜನರು ತಿರುಗಿ ಬಿದ್ದರು. ಮತ್ತೆ ತರಾತುರಿಯಲ್ಲಿ ಈ ವಿಧೇಯಕವನ್ನು ಜಾರಿಗೆ ತಂದರೆ ಇದರ ಬಗ್ಗೆ ಕೂಡ ಜನರು ತಿರುಗಿ ಬೀಳುತ್ತಾರೆ. ದಯವಿಟ್ಟು ಅದಕ್ಕೆ ಅವಕಾಶ ಕೊಡಬೇಡಿ. ಜನಸ್ನೇಹಿ, ಗ್ರಾಹಕ ಸ್ನೇಹಿ, tax payer friendly ಆಗಿರತಕ್ಕಂಥ ಒಂದು ಹೊಸ ಪದ್ಧತಿಯನ್ನು ತರಬೇಕಾದರೆ, it must be democratic, it should not be anti-democratic ಎನ್ನತಕ್ಕಂಥ ವಿನಂತಿಯನ್ನು ನಾನು ಮಾಡಿಕೊಳ್ಳುತ್ತೇನೆ.

ದಯವಿಟ್ಟು ಇದರ ಬಗ್ಗೆ ಜಾಯಿಂಟ್ ಕಮಿಟಿ ಮಾಡಬೇಕು. ನಮ್ಮ ನಾಯಕರು ಈಗಾಗಲೇ ಏನು ಹೇಳಿದ್ದಾರೆ ಅದನ್ನು ನಾನು ಆಗ್ರಹಿಸುತ್ತೇನೆ. ಆಗ ನಾವೂ ಕೂಡ ಹೊಣೆಯಾಗುತ್ತೇವೆ. ಜನಗಳಿಗೂ ಕೂಡ ನಾವು ಉತ್ತರ ಕೊಡುವುದಕ್ಕೆ ಸಾಧ್ಯವಾಗುತ್ತದೆ. ನಮ್ಮ ಅಭಿಪ್ರಾಯಗಳನ್ನು ಹೇಳುವುದಕ್ಕೆ ಸಾಧ್ಯವಿದೆ. ಆದಕಾರಣ ದಯವಿಟ್ಟು ಜನಾಭಿಪ್ರಾಯಗಳನ್ನು ದಮನ ಮಾಡಬೇಡಿ ಈ ಪ್ರಜಾಪ್ರಭುತ್ವದಲ್ಲಿ ಅಂತ ಹೇಳಿ, ಬಹುಶಃ ಎಷ್ಟೋ ಜನ Federation of Chambers of Commerce ನವರು ಕೂಡ ಹೊರಗಡೆ ಕಾಯ್ದುಕೊಂಡಿದ್ದಾರೆ. ನಮ್ಮ ಧ್ವನಿ ಬರುತ್ತದೋ ಇಲ್ಲವೋ, ನಮ್ಮ ಅಭಿಪ್ರಾಯಗಳನ್ನು ಹೇಗೆ ಹೇಳುವುದು. ಒಂದು ಅವಕಾಶವನ್ನೂ ಕೂಡ ಕೊಡಲಿಲ್ಲ ಎನ್ನತಕ್ಕಂಥ ಮಾತನ್ನು ಅವರು ಹೇಳುತ್ತಾರೆ. ಕೊಟ್ಟಿರತಕ್ಕಂಥ ಅವಕಾಶದಲ್ಲಿ ಈ ಸಂದರ್ಭದಲ್ಲಿ ಅಭಿಪ್ರಾಯಗಳನ್ನು ಬೆಂಗಳೂರಿನ 15 ಲಕ್ಷ property owners ಪರವಾಗಿ ಹೇಳಿದ್ದೇನೆ. ನಾನು ಹೇಳುತ್ತೇನೆ, ಬೆಂಗಳೂರು ನಗರದಲ್ಲಿ un-assessed properties ಇದೆ. ನೀವೇ ಹೇಳಿದ ಹಾಗೆ 40 ರಿಂದ 45 %un-assessed and un-declared properties ಇದೆ. ಅವನ್ನೆಲ್ಲಾ tax netಗೆ ತರತಕ್ಕಂಥ ಪ್ರಾಮಾಣಿಕ ಪ್ರಯತ್ನವನ್ನು ಮಾಡಿ. ಸಾಮಾನ್ಯ ಜನರು ಬೆಂಗಳೂರು ನಗರದಲ್ಲಿ ವಾಸ ಮಾಡತಕ್ಕಂಥ ವಾತಾವರಣವನ್ನು ನಿರ್ಮಾಣ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುತ್ತೇನೆ. ನೀವು ಸಾಮಾನ್ಯ ಜನರ ಮೇಲೆ ತೆರಿಗೆ ಹೊರೆಯನ್ನು ಹೆಚ್ಚು ಹೊರಿಸಬೇಡಿ. ಏಕೆಂದರೆ ನೀವು ತರಬೇಕೆಂದಿರುವ ಹೊಸ ಸಿಸ್ಟಂನಲ್ಲಿ ಬಹಳಷ್ಟು ಅನಾಮಲೀಸ್‌ಗಳಿವೆ. ಇವುಗಳನ್ನು ನಾನು ಹೇಳುತ್ತಾ ಹೋದರೆ ಹೆಚ್ಚು ಸಮಯ ಬೇಕಾಗುತ್ತದೆ. ದಯವಿಟ್ಟು ಈ ಕಾನೂನನ್ನು ಹಿಂತೆಗೆದುಕೊಳ್ಳಿ. zonalಗಳ ಬಗ್ಗೆ ಅಧಿಕಾರಿಗಳು ನಿಮಗೆ threadbare ಎಕ್ಸ್‌ಪ್ಲೈನ್ ಮಾಡಿರುವುದಿಲ್ಲ. ಪಾರ್ಕಿಂಗ್‌ಗೆ ಸಂಬಂಧಪಟ್ಟಂತೆ ಒಂದು ಕಾರ್, ಒಂದು ಸ್ಕೂಟರ್‌ಗೂ ಕೂಡ ನೀವು ಎಕ್ಸ್‌ಟ್ರಾ ಛಾರ್ಜ್ ಹಾಕುತ್ತೀರೆಂದರೆ ಬಹುಶಃ ಇದು ಸರಿಯಿಲ್ಲ. Public transportನ್ನು ಎಲ್ಲರೂ ನಂಬಿಕೊಂಡು ಓಡಾಡುತ್ತಿದ್ದಾರ?. ಅದಕ್ಕೋಸ್ಕರ 38 lakhs population ಆಗಿದೆಯಾ? ಎಲ್ಲೋ ಒಂದು ಕಡೆ commercial place ನಲ್ಲಿ ನಿಲ್ಲಿಸಿದರೆ ಅಲ್ಲಿಯೂ ಕೂಡ ಪಾರ್ಕಿಂಗ್ ಫೀಸ್ ಕೊಡಬೇಕು. ಗಂಟೆಗೆ 10 ರೂಪಾಯಿ ಫೀಸ್ ಕೊಡಬೇಕು. ಒಂದು Four wheeler ಆದರೆ 20 ರೂಪಾಯಿ ಕೊಡಬೇಕು.

ಮಾಲ್‌ಗಳಲ್ಲಾಗಲಿ ಅಥವಾ ಎಲ್ಲಿಯೇ ಆಗಲಿ ಯಾರೂ ಸಹ ಫ್ರೀ ಪಾರ್ಕಿಂಗ್ ಕೊಡುವುದಿಲ್ಲ. ಅಲ್ಲಿಯೂ ಫೀಸ್ ಕಟ್ಟಬೇಕು. ಮತ್ತೆ ಮನೆಗಳಲ್ಲಿಯೂ ಟ್ಯಾಕ್ಸ್ ಹೆಚ್ಚು ಕಟ್ಟಬೇಕು. ಇದೆಂಥಾ ದೌರ್ಭಾಗ್ಯ ನೋಡಿ. ಆದುದರಿಂದ ಮನೆಯಲ್ಲಿ ಒಂದು ಕಾರ್, ಒಂದು ಮೋಟಾರ್ ಬೈಕ್ ಫೀಸ್ ಇಲ್ಲದೆ ಓಪನ್ ಆಗಿ ನಿಲ್ಲಿಸುವುದಕ್ಕೆ ನೀವು ಅವಕಾಶವನ್ನು ಕೊಡಬೇಕು. ಇಲ್ಲವೆಂದರೆ ಖಂಡಿತವಾಗಿ ಬಹಳ ಕಷ್ಟವಾಗುತ್ತದೆ. ಒಂದು ವಿಷಯವನ್ನು ನಿಮಗೆ ಈಗ ಹೇಳಬಯಸುತ್ತೇನೆ. '50% of the self occupied buildings for residential and such class of self occupied non residential building as notified' ಎಂದು ಹೇಳುತ್ತಾರೆ. 50% of all self occupied residential and commercial building as per, ಈಗಿನ ಎಸ್.ಎ.ಎಸ್. 2000 ನೇ ಇಸವಿಯ ಪ್ರಕಾರ, ನಮ್ಮ ಅಭಿಪ್ರಾಯದ ಪ್ರಕಾರ, 50% of rebate for all classes of self occupied building to be retained, subjects being brought in the possibility of Inspector Raj. ಏಕೆಂದರೆ ಪಾರ್ಕಿಂಗ್ ಫೀಸ್ ಇಷ್ಟು ಕೊಟ್ಟೇದ್ದೀರಿ ಎಂದು ಹೇಳುತ್ತಾನೆ, ಮತ್ತೆ Inspector clutches ಗೆ ಹೋಗಬೇಕಾಗುತ್ತದೆ. ಈಗ ನೀವು 5% ರ‍್ಯಾಂಡಮ್ ಎನ್ನತಕ್ಕಂಥದ್ದನ್ನು ಜಾಸ್ತಿ ಮಾಡಿದ್ದೀರಿ. ಇದು ಸರಿಯಲ್ಲ. ನೀವು ಜನಗಳನ್ನು ನಂಬಿ. ನೀವು ಜನಗಳನ್ನು ಚುನಾವಣೆ ಬಂದಾಗ ನಂಬುತ್ತೀರಿ. ಆದರೆ ಚುನಾವಣೆಗಳಾದ ಮೇಲೆ ಮರೆಯುತ್ತೀರಿ. ಈ ಪ್ರವೃತ್ತಿಯನ್ನು ನೀವು ಬಿಡಿ. ಏಕೆಂದರೆ ನಾಳೆ ದಿವಸ ಈ ವಿಚಾರದಲ್ಲಿ ನಾವೆಲ್ಲರೂ ಹೊಣೆಯಾಗುತ್ತೇವೆ. ಈ ವಿಧಾನಸಭೆಯ ಪ್ರತಿಯೊಬ್ಬ ಸದಸ್ಯರು ಕೂಡ ಜನಗಳ ಮುಂದೆ ಹೋದಾಗ ಜನಗಳಿಗೆ ಉತ್ತರವನ್ನು ಕೊಡಬೇಕಾಗುತ್ತದೆ. ಆದುದರಿಂದ ನಾನು ಹೃದಯಾಂತರಾಳದಿಂದ ಕೇಳಿಕೊಳ್ಳುತ್ತಿದ್ದೇನೆ. ಜನಗಳಿಗೆ ನೀವು ಹೊರೆಯನ್ನು ಮಾಡಬೇಡಿ. ನೀವು ಶ್ರೀಮಂತ ಜನಗಳ ದೃಷ್ಟಿಯನ್ನು ಇಟ್ಟುಕೊಳ್ಳಬೇಡಿ. ಸಾಮಾನ್ಯ ಜನಗಳ ದೃಷ್ಟಿಯನ್ನು ಇಟ್ಟುಕೊಳ್ಳಿ. ಅವರಿಗೆ ಹೊರೆಯಾದರೆ ಖಂಡಿತವಾಗಿಯೂ ಕಷ್ಟವಾಗುತ್ತದೆಂದು ಹೇಳಬಯಸುತ್ತೇನೆ. 'The decision of the Commissioner is final' ಎಂದು ಈ ನೋಟಿಫಿಕೇಶನ್ ಪ್ರಕಾರ ಹೇಳುತ್ತೇವೆ. ಆದರೆ ಹಿಂದೆ as per 2000 SAS ಪ್ರಕಾರ, appeals

as per KMC Act 1976 ಇತ್ತು. ಇವೊತ್ತು 'our view is that it is draconian in nature with no appeal provision' Inspector Raj ಮತ್ತೆ ಇಲ್ಲಿ ಬರುವುದಕ್ಕೆ ಸಾಧ್ಯವಾಗುತ್ತದೆ. ದಯವಿಟ್ಟು ಈ ಒಂದು ಲೋಪದೋಷ ಹಾಗೂ ತಾರತಮ್ಯವನ್ನು ಸರಿಪಡಿಸಿ ಈ ಒಂದು ಹೊರೆಯನ್ನು ವಿಮುಕ್ತ ಮಾಡಬೇಕು. ಆ ರೀತಿ ಮಾಡದಿದ್ದರೆ ಜನತೆ ನಿಮ್ಮನ್ನು ಕ್ಷಮಿಸುವುದಿಲ್ಲ ಮತ್ತು ಈ ಸಿಸ್ಟಂ ವಿರುದ್ಧ ಜನರು ತಿರುಗಿ ಬೀಳುತ್ತಾರೆ. ಇದಕ್ಕೆ ಅವಕಾಶ ಕೊಡಬಾರದು ಎಂದು ಹೇಳಿ ಮತ್ತೊಮ್ಮೆ ತಮ್ಮಲ್ಲಿ ಮನವಿಯನ್ನು ಮಾಡಿಕೊಂಡು, ಅಶೋಕ್‌ರವರು ಇಲ್ಲೇನಿದ್ದಾರೆ ಅವರು ಕೂಡ ಜನಾಭಿಪ್ರಾಯಗಳನ್ನು ತಿಳಿದುಕೊಂಡು ತಮ್ಮ ಅಭಿಪ್ರಾಯವನ್ನು ಕೊಡಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಡಾ॥ ಅಶ್ವತ್ಥನಾರಾಯಣ್ (ಮಲ್ಲೇಶ್ವರಂ) :- ಮಾನ್ಯ ಅಧ್ಯಕ್ಷರೆ, ಇವೊತ್ತಿನ Karnataka Municipal Corporation (Amendment) Bill-2009ಗೆ ಹೊಸ ಸೆಕ್ಷನ್ ಅನ್ನು 108(ಎ) ಸೇರಿಸಿರುವುದು ನಿಜಕ್ಕೂ ವೈಜ್ಞಾನಿಕವಾಗಿದೆ. ಇದು ಉತ್ತಮವಾದಂಥ ಸೆಕ್ಷನ್ ಆಗಿದೆ. ಹಿಂದೆ 2000ದ ಎಸ್.ಎ.ಎಸ್. ಸಿಸ್ಟಂ ಯಾವುದಿತ್ತು ಅದಕ್ಕೆ ಕಾನೂನು ರೀತಿಯಲ್ಲಿ ಯಾವುದೇ ಒಂದು ತಿದ್ದುಪಡಿಯಾಗದೆ ತಂದಂಥ ಕಾನೂನಾಗಿತ್ತು. ಆ ಒಂದು ಸ್ಕೀಂಗೆ ಕಾನೂನಿನಲ್ಲಿ ತಿದ್ದುಪಡಿಯನ್ನು ತರದೆ ಎಸ್.ಎ.ಎಸ್. ಸಿಸ್ಟಂ ಅನ್ನು 2000 ದಲ್ಲಿ ಜಾರಿಗೆ ತಂದರು. ಎಸ್.ಎ.ಎಸ್. ಪ್ರಕಾರ zoning and guidance value basis ಮೇಲೆ ತಂದಂಥ ಸ್ಕೀಂ. ಆ ಒಂದು ಸ್ಕೀಂಗೆ ವೈಜ್ಞಾನಿಕವಾಗಿ ಕಾನೂನಿನಲ್ಲಿ ತಿದ್ದುಪಡಿ ತರುವಂಥದ್ದರ ಬಗ್ಗೆ ನಮ್ಮ ಸರ್ಕಾರ ಒಂದು ಹೆಜ್ಜೆ ಮುಂದೆ ಇಟ್ಟು ನಮ್ಮ ದೇಶದಲ್ಲಿಯೇ ಪ್ರಥಮ ಬಾರಿಗೆ ಕಾನೂನಿನಲ್ಲಿ ತಿದ್ದುಪಡಿಯನ್ನು ತಂದಿದೆ. ಕಳೆದ ಕಾಂಗ್ರೆಸ್ ಸರ್ಕಾರದಲ್ಲಿ ಯಾವುದೇ ಒಂದು ಯೋಚನೆ ಮಾಡದೆ Capital Value System ಅನ್ನು ತಂದರು. ಆ Capital Value System ನಲ್ಲಿ ಜನರ ಮೇಲೆ 900 % ವರೆಗೂ ತೆರಿಗೆ ಹೆಚ್ಚಾಗುತ್ತಿತ್ತು. ನಮ್ಮ ಸರ್ಕಾರ ಬಂದಮೇಲೆ ಜನತೆ ಮೇಲೆ ಹೆಚ್ಚಿನ ತೆರಿಗೆಯನ್ನು ಹಾಕಬಾರದು ಎಂದು ಜನತೆಯ ಕೋರಿಕೆಗೆ ಈ ಒಂದು ಬದಲಾವಣೆಯನ್ನು ತರುವಂಥದ್ದರ ಬಗ್ಗೆ ನಮ್ಮ ಸರ್ಕಾರ ಈ ಸದನದಲ್ಲಿ ವಿಧೇಯಕವನ್ನು ಮಂಡಿಸಿದ್ದಾರೆ. ಈ ಮಂಡನೆ ಬಗ್ಗೆ ನಮ್ಮ ಕಾಂಗ್ರೆಸ್ ಸ್ನೇಹಿತರು

ಹೇಳಿದಂತೆ ಕೆಲವೊಂದು ತಿದ್ದುಪಡಿಯಾಗಬೇಕಾಗುತ್ತದೆ. ಈ ಕಾನೂನಿನಲ್ಲಿ ಇವೊತ್ತು ಏನು ತಿದ್ದುಪಡಿಯನ್ನು ಮಾಡಿರುವಂಥದ್ದರಲ್ಲಿ ಸಬ್ ಸೆಕ್ಷನ್ 16 ರಲ್ಲಿ 'Minimum increase 15% and maximum 30% provision' ಎಂದು ಹೇಳಿರುವುದನ್ನು ಸರಿಪಡಿಸಬೇಕಾಗುತ್ತದೆ. ಮಿಕ್ಕಿದ್ದನ್ನೆಲ್ಲಾ ರೂಲ್ಸ್‌ನಲ್ಲಿ ಸರಿಪಡಿಸತಕ್ಕಂಥವುಗಳು. ಇವೊತ್ತು ಅಮೆಂಡ್‌ಮೆಂಟ್ ತಂದಿರುವಂಥದ್ದರಲ್ಲಿ ಬಹಳಷ್ಟು ಎಲ್ಲಾ ವೈಜ್ಞಾನಿಕವಾಗಿ ಸರಿ ಇದೆ. ಈ ಒಂದು ಸಬ್ ಸೆಕ್ಷನ್ 16ರಲ್ಲಿ, ನಾವು ಆ್ಯಕ್ಟ್‌ನಲ್ಲಿ minimum 15 % ಮಾಡುವ ಮೂಲಕ ರೂಲ್ಸ್‌ನಲ್ಲಿ ನಮಗೆ free hand ಸಿಗುವುದಿಲ್ಲ. ಈ ಒಂದು Section ಮತ್ತು Sub Section ಅನ್ನು ತಿದ್ದುಪಡಿ ಮಾಡಬೇಕೆಂದು ನಾನು ನಮ್ಮ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಇವೊತ್ತು zoning pattern ನಲ್ಲಾಗಲಿ ಅಥವಾ taxation ನಲ್ಲಾಗಲಿ ಇವೆಲ್ಲದರ ಬಗ್ಗೆ ರೂಲ್ಸ್‌ನಲ್ಲಿ ಚರ್ಚೆಯಾಗುವಂಥದ್ದು. ಇವೊತ್ತು ರೂಲ್ಸ್ ಬಗ್ಗೆ ನಾವು ಚರ್ಚೆ ಮಾಡಿ, ಇವೊತ್ತು ಜನತೆಯ ಬಯಕೆ, ಕಳೆದ ಎರಡು ವರ್ಷದಿಂದ ಟ್ಯಾಕ್ಸ್ ಕಟ್ಟುವುದಕ್ಕೆ ಅವಕಾಶವಾಗಿಲ್ಲ. ಈ ವರ್ಷದ ಮಾರ್ಚ್ ಅಂತ್ಯದೊಳಗೆ ಟ್ಯಾಕ್ಸ್ ಕಟ್ಟಲಿಲ್ಲವೆಂದರೆ Income tax exemption benefit ಅವರಿಗೆ ತಪ್ಪಿಹೋಗುತ್ತದೆ. ಇವೊತ್ತು ಜನತೆಯ ಕೋರಿಕೆ ಏನೆಂದರೆ, ಮೊದಲು tax system ಅನ್ನು introduce ಮಾಡಿ. ಇದು ಜನತೆಯ ಪರವಾಗಿದೆ. ಇದು ನಮಗೆ ಒಪ್ಪಿಗೆ ಇದೆಯೆಂದು ಜನತೆ ಒಪ್ಪಿಕೊಂಡಿದ್ದಾರೆ. ಜನರಿಗೆ ನಾವು ಈಗಾಗಲೇ ಜಾಹಿರಾತು ಕೊಡುವ ಮೂಲಕ ಜನರು ತಮ್ಮ objections ಏನೇ ಇದ್ದರೂ ಫೈಲ್ ಮಾಡಬೇಕೆಂದು ಮನವಿ ಮಾಡಿಕೊಂಡಿದ್ದೇವೆ.ಜನರು ಈ ಸಿಸ್ಟಂ ಬಗ್ಗೆ ಅವರ ಅಭಿಪ್ರಾಯವನ್ನು ವ್ಯಕ್ತಮಾಡಿದ್ದಾರೆ. ಟ್ಯಾಕ್ಸ್‌ನ್ನು ಈ ಮಾರ್ಚ್ ಅಂತ್ಯದೊಳಗೆ ಕಟ್ಟಲಿಲ್ಲವೆಂದರೆ ನಮ್ಮ Corporation ಗೂ ಕೂಡ ವರಮಾನ ಕಡಿಮೆ ಯಾಗುತ್ತದೆ. ಕಳೆದ ಎರಡು ವರ್ಷದಿಂದ Corporation ಗೆ ವರಮಾನ ಕಡಿಮೆಯಾಗಿ Bond Scheme ನಲ್ಲಿ ತೆಗೆದುಕೊಂಡಿರುವ ಸಾಲಕ್ಕೆ ಅಸಲು ಮತ್ತು ಬಡ್ಡಿ ಕಟ್ಟುವುದಕ್ಕೂ ಸಹ ಹಣ ಇಲ್ಲದಂಥ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದ್ದಾರೆ. ಬೆಂಗಳೂರು ನಗರದಲ್ಲಿ ಕಾರ್ಪೊರೇಶನ್‌ನಲ್ಲಿ ಹಣವಿಲ್ಲದಿದ್ದರೆ ಯಾವುದೇ ಅಭಿವೃದ್ಧಿ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಿಲ್ಲವಾಗಿದೆ. ಈ ಒಂದು ಅಭಿವೃದ್ಧಿ ಕೆಲಸವನ್ನು ಮಾಡಬೇಕಾದರೆ ಕಾರ್ಪೊರೇಶನ್‌ಗೆ ಹಣದ ಅವಶ್ಯಕತೆ ಇದೆ.

ಹಣದ ಅವಶ್ಯಕತೆ ಇರುವ ಕಾರಣ ಯಾವುದೇ ಒಂದು ರೀತಿಯಲ್ಲಿಯೂ ತಡ ಮಾಡದೆ ಈಗಾಗಲೇ ಮಂಡನೆಯಾಗಿರುವ ವಿಧೇಯಕವನ್ನು ನಾವು ಪಾಸ್ ಮಾಡಬೇಕಾಗುತ್ತದೆ. ಇನ್ನೂ ತಡವಾದರೆ ಜನರಿಗೆ ಬಹಳ ತೊಂದರೆಯಾಗುತ್ತದೆ. ಜನತೆಯ ದೃಷ್ಟಿ ಕೂಡ ಇಂದು ಈ ಒಂದು ವಿಧೇಯಕವು ಅಂಗೀಕಾರವಾಗಬಹುದು ನಾನು ಹೇಳಬಯಸುತ್ತೇನೆ.

ಶ್ರೀ ಆರ್. ಅಶೋಕ್ (ಸಾರಿಗೆ ಸಚಿವರು) :- ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಸೋಮಣ್ಣನವರು ಮಾತನಾಡಿ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಈ ತೆರಿಗೆ ಸೋರಿಕೆಗಳ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ.

ಮಾನ್ಯ ಸೋಮಣ್ಣನವರು ಈ ತೆರಿಗೆ ಸೋರಿಕೆಗಳ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಸಲಹೆಗಳನ್ನು ಕೊಟ್ಟಿದ್ದಾರೆ. ಈಗಾಗಲೆ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ 6,00,000 ಮನೆಗಳು ತೆರಿಗೆ ವ್ಯಾಪ್ತಿಯಲ್ಲಿ ಬರುತ್ತಿದ್ದವು. ಇನ್ನು ಮುಂದಿನ ದಿನಗಳಲ್ಲಿ 12,00,000 ಲಕ್ಷದವರೆಗೂ ಮನೆಗಳು ತೆರಿಗೆ ವ್ಯಾಪ್ತಿಯಲ್ಲಿ ತೆಗೆದುಕೊಳ್ಳುತ್ತಿದ್ದೇವೆ. ಮುಖ್ಯವಾಗಿ revenue sitesನವರು ಏನಿದ್ದಾರೆ ಅವರಿಗೆ ತೆರಿಗೆ ಕಟ್ಟುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಬಹಳಷ್ಟು ಜನ ನಾವು ತೆರಿಗೆ ಕಟ್ಟುತ್ತೇವೆಂದು ಹೇಳಿದರೂ ನಮಗೆ ಕಟ್ಟಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಅವರಿಗೆ ಎಲ್ಲಾ facilities ಕೊಡುತ್ತಿದ್ದೆವು. ಅದು ನೀರು, ರಸ್ತೆ, ಬೀದಿದೀಪ ಎಲ್ಲಾ ಕೊಟ್ಟರೂ ಕೂಡ ಅವು ತೆರಿಗೆ ವ್ಯಾಪ್ತಿಯಲ್ಲಿ ಬರುತ್ತಿರಲಿಲ್ಲ. ಯಾರು ಬೃಹತ್ ಬೆಂಗಳೂರು ವ್ಯಾಪ್ತಿಯಲ್ಲಿ ಬರುತ್ತಾರೋ ಅವರೆಲ್ಲರಿಗೂ ಈ revenue sitesನಲ್ಲಿ ಬರುವವರಿಗೂ ತೆರಿಗೆ ಕಟ್ಟುವುದಕ್ಕೆ ಈ schemeನಲ್ಲಿ ತರುತ್ತಿದ್ದೇವೆ. ಅದರಿಂದ ನಮ್ಮ ಸೋರಿಕೆ ಏನಿದೆ ಅದನ್ನು ತಡೆಗಟ್ಟಬಹುದು, ಆದಾಯ ಕೂಡ ಜಾಸ್ತಿಯಾಗುತ್ತದೆ. ಮಾನ್ಯ ಸೋಮಣ್ಣನವರು ಬಡವರಿಗೆ ಹೆಚ್ಚು ತೆರಿಗೆ ಹಾಕಬೇಡಿ ಎಂದು ಹೇಳಿದ್ದಾರೆ. ಕೊಳಚೆ ಪ್ರದೇಶದಲ್ಲಿ ವಾಸ ಮಾಡುವವರಿಗೆ ಹಿಂದೆ ಒಂದು ರೂಪಾಯಿ, ಎರಡು ರೂಪಾಯಿ ಒಂದು sq.ftಗೆ ತೆರಿಗೆ ಹಾಕುವ ವಿಚಾರ ಇತ್ತು. ಆದರೆ ನಾವು ಅವರಿಗೆ ಆ ರೀತಿ fix ಮಾಡುತ್ತಿಲ್ಲ. ಏಕೆಂದರೆ ಅವರು ಬಡವರಿದ್ದಾರೆ, ಕೆಲವರಿಗೆ ವಿದ್ಯಾಭ್ಯಾಸದಲ್ಲಿ ತೊಂದರೆ ಇದೆ, ಅದಕ್ಕೆ slumನಲ್ಲಿ ಮೂರು ಚದರ ಒಳಗಡೆ ವಾಸ ಮಾಡುತ್ತಿರುವವರಿಗೆ lumpsum ಆಗಿ 80 ರೂಪಾಯಿ ಕಟ್ಟಿದರೆ ಅವರಿಗೆ ಮುಗಿದುಹೋಯಿತು. ಮಾನ್ಯ ಸದಸ್ಯರಾದ ಸೋಮಣ್ಣ ಹಾಗೂ ದಿನೇಶ್ ಗುಂಡೂರಾವ್‌ರವರು ಪ್ರಸ್ತಾಪ ಮಾಡಿದ್ದಾರೆ. ಸ್ವಂತ ವಾಸಕ್ಕಾಗಿ ಬಳಕೆ

ಮಾಡುವವರಿಗೆ ಈಗಾಗಲೆ ರಿಯಾಯಿತಿ 50% ಕೊಟ್ಟಿದೆ. ಆದರೆ ಮನೆಯ ಮಾಲೀಕ ಸ್ವಂತವಾಗಿ ವಾಣಿಜ್ಯ ಕಾರ್ಯ ಚಟುವಟಿಕೆಯನ್ನು ನನ್ನ buildingನಲ್ಲಿ ಮಾಡುತ್ತೇನೆಂದರೆ ಆ ವಾಣಿಜ್ಯ ಮಳಿಗೆಗಳಿಗೂ ಕೂಡ 50% ರಿಯಾಯಿತಿ ಕೊಡಬೇಕೆಂದು ನಾವು ತೀರ್ಮಾನಗಳನ್ನು ಮಾಡುತ್ತಿದ್ದೇವೆ. ಅದರ ಜೊತೆಗೆ ಬೃಹತ್ ಬೆಂಗಳೂರಿಗೆ 110 ಹಳ್ಳಿಗಳು ಹೊಸದಾಗಿ ಸೇರುತ್ತಿವೆ. ಅಲ್ಲಿ ಹಳ್ಳಿಯ ವಾತಾವರಣ ಇದ್ದು, ಹಳ್ಳಿ ರೀತಿಯಲ್ಲಿ taxಗಳನ್ನು ಗ್ರಾಮಪಂಚಾಯಿತಿಗೆ ಕಟ್ಟುತ್ತಿದ್ದರು. ಹಾಗಿದ್ದಾಗ ಇವು ಒಂದೇ ಬಾರಿಗೆ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಬಂದಾಗ ತೆರಿಗೆಗಳನ್ನು ನೋಡಿದರೆ ಭಯವಾಗುತ್ತದೆ. ಆದುದರಿಂದ ಆ 110 ಹಳ್ಳಿಗಳಿಗೆ ಹೆಚ್ಚು ತೆರಿಗೆ ಹಾಕುವುದಕ್ಕೆ ಹೋಗದೆ ಬಹಳ minimum ಆಗಿ, ಗ್ರಾಮ ಪಂಚಾಯಿತಿಯಲ್ಲಿ ಏನು tax ಕಟ್ಟುತ್ತಿದ್ದರು, ಅಷ್ಟೇ ಮಟ್ಟದ ತೆರಿಗೆಗಳನ್ನು ಅವರಿಗೆ ಹಾಕಬೇಕು ಅಥವಾ ಅದಕ್ಕಿಂತ ಕಡಿಮೆ ಆದರೂ ಮಾಡಬೇಕು ಎಂದು ನಾವು ತೀರ್ಮಾನವನ್ನು ಮಾಡುತ್ತಿದ್ದೇವೆ. ದೂರವಾಣಿ ಗೋಪುರಗಳು ಮತ್ತು ಜಾಹಿರಾತು ಫಲಕಗಳು ತೆರಿಗೆ ವ್ಯಾಪ್ತಿಯಲ್ಲಿ ಇರಲಿಲ್ಲ. ಇದನ್ನೂ ಕೂಡ ನಾವು ತೆರಿಗೆ ವ್ಯಾಪ್ತಿಯಲ್ಲಿ ತರಬೇಕೆಂದು ನಾವು ಹೊಸದಾಗಿತರತಕ್ಕಂಥ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಇನ್ನು parking areaಗೆ ಕೂಡ ರಿಯಾಯಿತಿಗಳನ್ನು ಕೇಳುತ್ತಿದ್ದಾರೆ. ಅದನ್ನು ನಿಜಕ್ಕೂ consider ಮಾಡುತ್ತೇವೆ. ಸ್ವಂತಕ್ಕೆ ಯಾರು ಉಪಯೋಗ ಮಾಡುತ್ತಾರೆ ಮತ್ತು ಬೇರೆಯವರಿಗೂ ಪಾರ್ಕಿಂಗ್ ವ್ಯವಸ್ಥೆ ಮಾಡಿಕೊಡುವಂತಹ ವಿಚಾರದಲ್ಲಿ ಮುಂದೆ rules frame ಮಾಡುವಂತಹ ಸಂದರ್ಭದಲ್ಲಿ ನಾವು ಪರಿಶೀಲನೆ ಮಾಡುತ್ತೇವೆ. ಅದೇ ರೀತಿ zone system ಹಿಂದೆ CVSನಲ್ಲಿ ಏನಿತ್ತು, ಇವತ್ತು ಆರು zone ಇದೆ, ಮುಂದೆ ಕೂಡ ಆರು zone ಮಾಡುವುದಕ್ಕೆ ನಾವು ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಮಾನ್ಯ ಅಶ್ವತ್ಥನಾರಾಯಣ್‌ರವರು ಹೇಳಿದ ಹಾಗೆ ಕಳೆದ ಎರಡು ವರ್ಷದಿಂದ ಬೆಂಗಳೂರು ಮಹಾನಗರ ಪಾಲಿಕೆ ತೆರಿಗೆಯನ್ನು collect ಮಾಡುತ್ತಿಲ್ಲ. ಅದಕ್ಕೆ ಜನ ನಾವು Income Tax pay ಮಾಡಬೇಕು, ತೊಂದರೆಯಾಗುತ್ತಿದೆ, ದಯವಿಟ್ಟು ಬೇಗ ಈ ಸಿಸ್ಟಂ ಅನ್ನು ತೆಗೆದುಕೊಂಡು ಬನ್ನಿ ಎಂದು ಹೇಳುತ್ತಿದ್ದಾರೆ. ಬೆಂಗಳೂರಿನ ಜನ ನನಗೆ ನಾಲ್ಕು ಬಾರಿ ಆಶೀರ್ವಾದ ಮಾಡಿ ಕಳುಹಿಸಿದ್ದಾರೆ. ನಾನು ವಿಧಾನಸಭೆಯಲ್ಲಿ ನೋಡಿದ್ದೇನೆ. ಮೊದಲನೇ ಬಾರಿಗೆ ಒಂದು ಸರ್ಕಾರ ಜನಸಾಮಾನ್ಯರನ್ನು ಕರೆದು ಅವರ ಜೊತೆ ಚರ್ಚೆ ಮಾಡಿ ಈ ಒಂದು Actನ್ನು

ತರುತ್ತಿದ್ದೇವೆ. ಈ CVS system 2003ರಲ್ಲಿ ಬಂತು. ಮಾನ್ಯ ದಿನೇಶ್ ಗುಂಡೂರಾವ್‌ರವರಿಗೆ ಜ್ಞಾಪಕ ಇರಬಹುದು, ಆಗ ನಮ್ಮ ಸರ್ಕಾರ ಇರಲಿಲ್ಲ. CVS ಬೇಡ, SAS system ಮಾಡಬೇಕು ಎಂದು ಜನ ಪ್ರತಿಭಟನೆ ಮಾಡಿದರು. 20% ಹೆಚ್ಚುವರಿಯಾಗಿ ನೀವು collect ಮಾಡಿ ಎಂದು ಹೇಳಿ ಜನ ಸಾಮಾನ್ಯರು ಬಂದಿದ್ದರು, ಸಂಘ ಸಂಸ್ಥೆಯವರು ಅವರೇ ಕೊಟ್ಟಿದ್ದರು. ಇವತ್ತು ಮಾನ್ಯ ಮುಖ್ಯ ಮಂತ್ರಿಗಳ ಅನುಮತಿಯನ್ನು ಪಡೆದು 20% ಮತ್ತೊಂದು ರಿಯಾಯಿತಿಯನ್ನು ಬೆಂಗಳೂರು ಜನತೆಗೆ ವಿಶೇಷ ಕೊಡುಗೆಯಾಗಿ ಕೊಡುವುದಕ್ಕೆ ತಯಾರಾಗಿದ್ದೇನೆ. ನಾವು 20% ತೆರಿಗೆ ಏರಿಕೆ ಮಾಡಬೇಕೆಂದು ಏನು ತೀರ್ಮಾನ ಮಾಡಿದ್ದೆವು, ಆ 20% ತೆರಿಗೆಯನ್ನು ಅನ್ನು ಕೂಡ ವಾಪಸ್ಸು ತೆಗೆಯುವುದಕ್ಕೆ ನಾವು ತೀರ್ಮಾನಗಳನ್ನು ಮಾಡಿದ್ದೇವೆ. ಆ ದೃಷ್ಟಿಯಿಂದ ಬೆಂಗಳೂರು ಜನತೆಗೆ ಹೇಳುತ್ತಿದ್ದೇವೆ, Corporation ಚುನಾವಣೆ, ಲೋಕಸಭಾ ಚುನಾವಣೆ ನಮ್ಮ ಮನಸ್ಸಿನಲ್ಲಿ ಇಲ್ಲ. ಬೆಂಗಳೂರು ಜನತೆಗೆ ಒಳ್ಳೆಯ ಕೆಲಸ ಮಾಡಬೇಕು. ನಾವು ಈ ವಿಚಾರವನ್ನು ಚುನಾವಣೆ ಮುಂಚಿತವಾಗಿ ಹೇಳಿದ್ದೆವು, ಈ CVS system ಏನು 2003ರಲ್ಲಿ ತಂದಿತ್ತು, ಜನ ಅದರ ವಿರುದ್ಧ ಪ್ರತಿಭಟನೆ ಮಾಡಿದ್ದಾರೆ. ನಾವು SAS system ತರುತ್ತೇವೆ ಎಂದು ಮಾತು ಕೊಟ್ಟಿದ್ದೆವು, ಆ ಪ್ರಕಾರ ಇವತ್ತು ನುಡಿದಂತೆ ನಡೆದಿದ್ದೇವೆ.

ಶ್ರೀ ಕೆ.ಜೆ. ಜಾರ್ಜ್:- ಮಾನ್ಯ ಅಶೋಕ್‌ರವರೇ, ಒಂದು point clarification ಮಾಡಿ. Capital Valuation Systemನಲ್ಲಿ ಯಾವ guidelines ಮಾಡುತ್ತೀರಿ? Guidance value ಎಂದು ಹೇಳಿದರೆ ಅದು ಬಾರಿ ದೊಡ್ಡದಾಗುತ್ತದೆ, 50% reduction ಕೊಟ್ಟರೂ ಏನೂ ಕೊಟ್ಟರೂ ಅದು ಆಗುವುದಿಲ್ಲ. Guidance value ಏನು ಇವತ್ತು transfer of propertiesಗೆ ಇಟ್ಟಿದ್ದಾರೆ, ಅದರಲ್ಲಿ ನೀವು ಏನಾದರೂ ಅನ್ಯಾಯ ಮಾಡಿದರೆ, ಇವತ್ತು ಬೆಂಗಳೂರು ನಗರದ ಎಲ್ಲಾ ಜನ ಸೇರಿ ದೊಡ್ಡ ಧರಣಿಗಳು ಮಾಡುತ್ತಾರೆ, ನೀವು ಅದನ್ನು ಎದುರಿಸುವುದಕ್ಕೆ ready ಇರಬೇಕು. ದಯವಿಟ್ಟು ಆ transfer of propertiesಗೆ ಯಾವ guidance value ಇಟ್ಟಿದ್ದೀರೋ, ಆ capital value ಆಗಿ ಆಧಾರ ಮಾಡಬಾರದು ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಆರ್. ಅಶೋಕ್ :- ಈಗಾಗಲೆ ನಾನು ಬೆಂಗಳೂರು ಜನರು ತೆರಿಗೆ ಕಟ್ಟುವಂತಹ system ಬಗ್ಗೆ ಬೆಂಗಳೂರು ನಾಗರಿಕರ ಜೊತೆ ಚರ್ಚೆ ಮಾಡಿದ್ದೇನೆ. ಇದು ಜನಸ್ನೇಹಿಯಾದಂತಹ system. ಮಾನ್ಯ ಜಾರ್ಜ್‌ರವರು ಏನು ಹೇಳಿದರು, 2003ರಲ್ಲಿ CVS system ನೀವೇ ತಂದಂತಹ system.

ಶ್ರೀ ಕೆ.ಜೆ. ಜಾರ್ಜ್ :- ಯಾವ guidelines ತರುತ್ತಿದ್ದೀರಿ? Capital value ಗೆ ಯಾವ guidelines ತರುತ್ತಿದ್ದೀರಿ ಎಂದು ನಾನು ಕೇಳುತ್ತಿರುವುದು. system ಅಲ್ಲ, ಅದು important. ಆವತ್ತು ಸಭೆಯಲ್ಲಿ ಏನಾಗಿದೆ ಎಂದು ಗೊತ್ತಿದೆ. ಆವತ್ತು ಸಭೆಯಲ್ಲಿ ಇಡೀ ಜನ oppose ಮಾಡಿದ್ದಾರೆ. ಅಲ್ಲಿ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಕೂಡ ಇದ್ದರು. ಆವತ್ತು ನಿಜವಾಗಿ ಏನಾಗಿದೆ ಎಂದು ಹೇಳಿ.

ಶ್ರೀ ವಿ. ಸೋಮಣ್ಣ :- ಮಾನ್ಯ ಅಧ್ಯಕ್ಷರೇ, ಒಂದೇ ಒಂದು clarification. ತಾವು ಚೆನ್ನಾಗಿ ಹೇಳುತ್ತಿದ್ದೀರಿ. ಆದರೆ ಇಲ್ಲಿ ನೀವು ಹೇಳಿದ ಹಾಗೆ ರೂಲ್‌ನಲ್ಲಿ ಇಲ್ಲ. ಇಲ್ಲಿ ಕಾನೂನು ಸಚಿವರಾದ ಸುರೇಶ್ ಕುಮಾರ್ ಹಾಗೂ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಇದ್ದಾರೆ, ನನಗೆ ಒಂದೇ ಒಂದು clarification ಬೇಕು, ನಮ್ಮ ಸ್ನೇಹಿತರಾದ ಅಶೋಕ್‌ರವರಿಗೆ ವಿನಂತಿ ಮಾಡುವುದೇನೆಂದರೆ 2000ದಲ್ಲಿ ತಂದಂತಹ Self Assessment Scheme ಏನು ಮಾಡಿದರು ಅದನ್ನು ಚಾಚೂತಪ್ಪದೆ ತಾವು implement ಮಾಡುವುದಕ್ಕೆ ನಿಮಗೆ ತೊಂದರೆ ಏನಿದೆ? ಇಲ್ಲವೆನ್ನುವುದಾದರೆ ಅಳಿಯ ಅಲ್ಲ ಮಗಳ ಗಂಡ ಎಂದು ಹೇಳಿ CVS ಇರುವಂತಹ ಕೆಲವು ಅಂಶಗಳನ್ನು ಕಾನೂನಿನಲ್ಲಿ ಸೇರಿಸಿ, Capital Value System ಬೇಡ ಎಂದು ಹೇಳಿದಂತಹ ಬೆಂಗಳೂರು ನಗರದ ಜನರಿಗೆ ಎಲ್ಲೋ ಒಂದು ಕಡೆ ಮಂಕುಬೂದಿ ಎರಚುವ ಕೆಲಸ ಬೇಡ. ನಿಮ್ಮ ಕಳಕಳಿಯನ್ನು ನಾನು ಅಭಿನಂದಿಸುತ್ತೇನೆ. ಆದರೆ ನೀವು ಮಾಡಬೇಕಾಗಿರುವುದು ಇಷ್ಟೇ, ಸನ್ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಪರವಾಗಿದ್ದಾರೆ. ನಾನು ತಮಗೆ ಕೇಳುವುದು ಇಷ್ಟೇ, 600-700 ಕೋಟಿ ರೂಪಾಯಿ ಬರುತ್ತಿದೆ. 2000ದಲ್ಲಿ High Courtನ ಆದೇಶ ಏನಿತ್ತು, ಆವತ್ತು ಆಯುಕ್ತರು ಮಾಡಿದ್ದಂಥಾದ್ದನ್ನು ಸಾರ್ವಜನಿಕರು ಪ್ರಸ್ತಾಪ ಮಾಡಿದ್ದರಿಂದ, ಈ ಒಂದು Act ಬಂತು. ನಾನು ತಮ್ಮ ಮೂಲಕ ವಿನಂತಿ ಮಾಡುವುದು ಇಷ್ಟೇ, 2000ದಲ್ಲಿ

ಮಾಡಿರತಕ್ಕಂಥ SAS ಅನ್ನು ನೂರಕ್ಕೆ ನೂರರಷ್ಟು ಜಾರಿಗೆ ತರುವುದಕ್ಕೆ ನಿಮಗೆ ಏನು ತೊಂದರೆ ಇದೆ? ಇವತ್ತು ತಾವು ಏನು ಮಾಡಿದ್ದೀರಿ? ಎಷ್ಟೊಂದು ತೊಂದರೆಯಾಗುತ್ತದೆ ಎಂದರೆ ಮಾನ್ಯ ಸುರೇಶ್ ಕುಮಾರ್‌ರವರು ಓದಬೇಕು. ತಾವು Residential and Commercial ಎನ್ನುವುದನ್ನು ಬಿಟ್ಟು, ಮೂರು ವರ್ಷಗಳಿಗೊಂದು ಸಾರಿ 15% ಜಾಸ್ತಿ ಮಾಡುತ್ತೇನೆಂದರೆ ಅದರ ಪರಿಣಾಮ ಏನಾಗಬಹುದು? ಕೋರ್ಟ್ ಆದೇಶದ ಮೇಲೆ ಇವತ್ತು ಈ Act ತಂದಿದ್ದೇವೆ ವಿನಃ ಕೋರ್ಟ್ ಸಾರ್ವಜನಿಕರ ಪರವಾಗಿ ಕೊಟ್ಟ ಮೇಲೆ Capital Value System ಸರಿಯಿಲ್ಲವೆಂದು ಹೇಳಿದ್ದರಿಂದ ತಂದಿದ್ದೀರಿ. 2000ದಲ್ಲಿ ಮಾಡಿರತಕ್ಕಂಥ SAS ಅನ್ನು as it is ತಾವು ಜಾರಿಗೆ ತಂದರೆ ಖಂಡಿತವಾಗಿ ಇದರಿಂದ ಏನೂ ತೊಂದರೆ ಇಲ್ಲ. ಚುನಾವಣೆ ಎನ್ನುವುದಕ್ಕಿಂತ ಹೆಚ್ಚಾಗಿ ಬಿಜೆಪಿಯು ಸರ್ಕಾರ ಬರುವಾಗ ಬೆಂಗಳೂರು ನಗರದಲ್ಲಿ 17 ಜನ ಶಾಸಕರನ್ನು ಕೊಟ್ಟಿದೆಯೆನ್ನುವ ಹೆಗ್ಗಳಿಕೆಗೆ ಪಾತ್ರರಾಗಿದ್ದೀರಿ. ತಾವು ಎಲ್ಲೋ ಒಂದು ಕಡೆ ತಿರುಚಿ ಮುರುಚಿ ಅಧಿಕಾರಿಗಳ ಭಾವನೆಗಳಿಗೆ ಸ್ಪಂದಿಸಿ ಈ ಸರ್ಕಾರಕ್ಕೆ ಕೆಟ್ಟ ಹೆಸರು ತೆಗೆದುಕೊಳ್ಳುತ್ತೇವೆಂದರೆ ನಮಗೇನೂ ತೊಂದರೆಯಿಲ್ಲ. ಮಾನ್ಯ ಅಧ್ಯಕ್ಷರ ಮುಖಾಂತರ ವಿನಂತಿ ಮಾಡುವುದು ಏನೆಂದರೆ 2000ದಲ್ಲಿ ಮಾಡಿರುವಂತಹ SAS ಅನ್ನು ನೂರಕ್ಕೆ ನೂರರಷ್ಟು ಜಾರಿಗೆ ತಂದು ತದನಂತರ ಐದು ವರ್ಷಗಳಿಗೆ ಜಾಸ್ತಿ ಮಾಡಬಹುದು ಎಂದು ಏನಿದೆ, ಆಗ ಒಂದು ಸಾರಿ ಮಾಡಿ. ಆಗ ನಮ್ಮನ್ನು ಕರೆಯಿರಿ. 2000 ರಲ್ಲಿ ಇದ್ದಂತಹ SAS ಅನ್ನು ನೂರಕ್ಕೆ ನೂರು ಜಾರಿಗೆ ತಂದು ಅವತ್ತು ಕಾನೂನು ಮಾಡಿದ್ದಾರೆ, ಅವತ್ತು ಪ್ರತಿಯೊಂದು ಆಗಿದೆ. ಅದು ಎಲ್ಲೋ ಒಂದು ಕಡೆ Act ಇಲ್ಲವೆಂಬ ದೃಷ್ಟಿಯಿಂದ ಬಂದಿದೆ. ನಾನು ತಮಗೆ ವಿನಂತಿ ಮಾಡುವುದೇನೆಂದರೆ ಇದನ್ನು ತರುತ್ತೀರಾ? ಅಥವಾ ತಿರುಚಿಮುರುಚಿ CVS ತರುತ್ತೀರಾ ಎಂದು ದಯಮಾಡಿ ತಿಳಿಸಬೇಕು.

ಶ್ರೀ ದಿನೇಶ್ ಗುಂಡೂರಾವ್ :- ಈ ಬಿಲ್ ತರುತ್ತಿರತಕ್ಕಂಥದ್ದು.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು :- ಮಾನ್ಯ ಅಧ್ಯಕ್ಷರೆ, ಮಹಾಪೌರರಾಗಿದ್ದಂಥ ಶ್ರೀ ರಾಮಚಂದ್ರಪ್ಪನವರು ಒಂದು S.A.S ಅನ್ನು 2000ನೇ ಇಸವಿಯಲ್ಲಿ ತಂದರು. ಇಲ್ಲಿ ಕಾಯಿದೆಗಳನ್ನು ಏನು ಮಾಡಿದ್ದಾರೆಂಬುದನ್ನು ನೋಡಿ, ಆಸ್ತಿಗಳ ಮೇಲೆ ನೋಂದಣಿ ಇಲಾಖೆಯು ನಿರ್ದೇಶಿಸಿರುವ ಬೆಲೆಗಳನ್ನು ಆಧಾರವಾಗಿಟ್ಟುಕೊಂಡು ಆರು ವಲಯಗಳನ್ನಾಗಿ ವಿಂಗಡಿಸಲಾಗಿದೆ. ಅಂದರೆ, ಅವತ್ತು

ಕೂಡ S.A.S ಅನ್ನು ತರುವಾಗ, ಈ ವಲಯಗಳನ್ನು ವಿಂಗಡಣೆ ಮಾಡಿದ್ದು ಹೇಗೆಂದರೆ, ಆವತ್ತಿನ guidance value ಸರ್ಕಾರದ ಬೆಲೆಯ ಮೇಲೆ ಮಾಡಿದ್ದರು. ಇವತ್ತು ಕೂಡ ಮಾನ್ಯ ಶ್ರೀ ಅಶೋಕ್‌ರವರು ಏನು ಮಂಡಿಸಿದ್ದು ಎಂದರೆ ನಾವು ಯಾವುದೇ ಟ್ಯಾಕ್ಸ್ ಅನ್ನು, SAS ಟ್ಯಾಕ್ಸ್ ಅನ್ನು ಜಾಸ್ತಿ ಮಾಡುತ್ತಿಲ್ಲ. ಅವರು ಅದನ್ನು clear ಆಗಿ ಹೇಳಿದ್ದಾರೆ. ಎರಡನೆಯದಾಗಿ ಏನೆಂದರೆ SAS rules ಏನಿತ್ತು ಅದನ್ನು ಆಧಾರವಾಗಿಟ್ಟುಕೊಂಡೇ ಇವತ್ತು ನಾವು frame ಮಾಡಿದ್ದೇವೆ. ಇವತ್ತು ನಾವು ಟ್ಯಾಕ್ಸ್ ಅನ್ನು ಜಾಸ್ತಿ ಮಾಡುತ್ತೇವೆಂದು ಎಲ್ಲಿಯೂ ಹೇಳಿಲ್ಲ. ಕೆಲವು area 840 ಚದರ ಕಿ.ಮೀ. ಆಗಿರುವುದರಿಂದ ಕೆಲವು ಭಾಗಗಳಲ್ಲಿ ಮಾತ್ರ ಆ ವಲಯಗಳು ಸ್ವಲ್ಪ ಹೆಚ್ಚಿದೆ. ಕೆಲವು ಶ್ರೀಮಂತ ವರ್ಗಗಳು ಇದರಲ್ಲಿ ಸೇರಿಕೊಂಡಿವೆ. ಅದನ್ನು ಬಿಟ್ಟರೆ ಇವತ್ತು ಇವರು ಹಾಗೇ ಆಗಿ ಹೋಗುತ್ತದೆ, ಹೀಗೆ ಆಗಿ ಹೋಗಿ ಬಿಡುತ್ತದೆಂದು ಏನು ಹೇಳುತ್ತಿದ್ದಾರೆ, ಆ ರೀತಿಯಲ್ಲಿ ಜನರಿಗೆ ತೊಂದರೆಯಾಗುವಂಥ ಕಾನೂನು ಇದಲ್ಲ. ಈ ಕಾಯಿದೆಯಲ್ಲಿ ತಿದ್ದುಪಡಿ ತಂದಿರುವಂಥಾದ್ದು ಜನರಿಗೆ ಅನುಕೂಲ ವಾಗುವ ಹಾಗೆ ಟ್ಯಾಕ್ಸ್ ಅನ್ನು ಜಾಸ್ತಿ ಮಾಡದೇ, ಅವರು ಸಹ ಯಾವ ಟ್ಯಾಕ್ಸ್ ಅನ್ನು ಜಾಸ್ತಿ ಮಾಡುವುದಿಲ್ಲವೆಂದು ಹೇಳಿದ್ದಾರೆ. ನಾವು 20% ಜಾಸ್ತಿ ಮಾಡುತ್ತೇವೆಂದು ಹೇಳಿದ್ದೆವು. ಆದರೂ ನಾವು ಇವತ್ತು 20% ಟ್ಯಾಕ್ಸ್ ಜಾಸ್ತಿ ಮಾಡುವುದಿಲ್ಲ. ಅವತ್ತಿನ ದರ ಏನು ಇತ್ತು, ಆ ದರದಂತೆ ಮಾಡುತ್ತೇವೆಂಬ ಮಾತನ್ನು ಕೂಡ ಹೇಳಿದ್ದಾರೆ. ಹಾಗಾಗಿ ಇದು ಜನಸಾಮಾನ್ಯರಿಗೆ ಹೊರೆಯಾಗುವ ರೀತಿಯಲ್ಲಿ ನಾವು ನಿರ್ಧಾರಗಳನ್ನು ತೆಗೆದುಕೊಂಡಿಲ್ಲ. ಎರಡನೆಯದಾಗಿ, ಅನೇಕ ಬಾರಿ ಇದಕ್ಕೆ ಸಂಬಂಧಪಟ್ಟಹಾಗೆ ಎಲ್ಲಾ associations ಜೊತೆಗೆ ನಾವು ಮಾತನಾಡಿದ್ದೇವೆ. ಎಲ್ಲರ ಅಭಿಪ್ರಾಯವನ್ನು ಪಡೆದುಕೊಂಡಿದ್ದೇವೆ. ಎಲ್ಲಾ ಅಭಿಪ್ರಾಯಗಳನ್ನು ತೆಗೆದುಕೊಂಡ ಮೇಲೆ ಈಗ ತಿದ್ದುಪಡಿಯನ್ನು ತಂದಿರುವುದು. ಕೆಲವು associationನವರಿಗೆ apprehension ಇತ್ತು, ಇವರು ಜಾಸ್ತಿ ಮಾಡುತ್ತಿದ್ದಾರೆ, ವಲಯಗಳನ್ನು ಜಾಸ್ತಿ ಮಾಡುತ್ತಿದ್ದಾರೆ, slab system ಅನ್ನು ಜಾಸ್ತಿ ಮಾಡುತ್ತಿದ್ದಾರೆಂದು. ನಾವು ಈಗಾಗಲೆ ನಿರ್ಧಾರ ಮಾಡಿದ್ದೇವೆ, slab systemನಲ್ಲಿ ಜಾಸ್ತಿ ಮಾರ್ಪಾಡುಗಳು ಇರುವುದಿಲ್ಲ. ನೋಂದಣಿ ಕಚೇರಿಗಳಲ್ಲಿ ಆಸ್ತಿಗಳ ಬೆಲೆ ಏನು ಇದೆ, ಅದು ಲೆಕ್ಕಕ್ಕೆ ಬರುವುದಿಲ್ಲ. ನಾವು ಕಟ್ಟಡದ ಬಾಡಿಗೆ......

ಶ್ರೀ ಕೆ.ಜೆ. ಜಾರ್ಜ್ :- 2004ರಲ್ಲಿ guidance value ಎಷ್ಟು ಇತ್ತು? 2009ರಲ್ಲಿ guidance value ಎಷ್ಟು ಇದೆ? ಇವತ್ತು market value, 100% ಅಲ್ಲ 300% guidance value ಜಾಸ್ತಿಯಾಗಿದೆ. 2004ನಲ್ಲಿ ಎಷ್ಟು ಇತ್ತು? ಈಗ ನಾನು ಒಂದು ವಿಷಯವನ್ನು ಕೇಳುತ್ತಿದ್ದೇನೆ. ಇದು ನಿಮ್ಮ manifesto, ಇದು ಬಿ.ಜೆ.ಪಿಯವರು ಹೊರಡಿಸಿದಂತಹ manifesto. ಇವತ್ತು CVS Tax scheme which has been subject to lot of public comment will be reviewed and the law amended and, if need be to put in the place of people friendly property tax. ಇವತ್ತು ನೀವು ಏನಾದರೂ guidance value ಪ್ರಕಾರ property tax ಅನ್ನು ಹಾಕಿದರೆ, ಬಡವರು ಮತ್ತು ಮನೆಯನ್ನು ಹೊಂದಿರುವವರು ಮನೆಯನ್ನು ವಾರಿ ಟ್ಯಾಕ್ಸ್ ಅನ್ನು ಕೊಡಬೇಕಾಗುವಂಥ ಸಂದರ್ಭ ಇವತ್ತು ಆಗುತ್ತದೆ. ಇವತ್ತು ಅನ್ಯಾಯವಾಗುತ್ತಿದೆ.

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್ :- ಒಂದು Joint Select Committee ಮಾಡಿ. ಅಲ್ಲಿ ಚರ್ಚೆ ಮಾಡಿ ತೀರ್ಮಾನ ಮಾಡಿ, ಇಷ್ಟೊಂದು ಹಠ ಏಕೆ?

ಶ್ರೀ ಹೆಚ್.ಡಿ. ರೇವಣ್ಣ :- ಮಾನ್ಯ ಅಧ್ಯಕ್ಷರೆ, ...

(ಗೊಂದಲ)

ಅಧ್ಯಕ್ಷರು :- ಮಾನ್ಯ ರೇವಣ್ಣನವರೆ ಚರ್ಚೆ ಮುಗಿದಿದೆ. ತಾವು ಮೊದಲೇ ಮಾತನಾಡ ಬೇಕಾಗಿತ್ತು.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ:- ಮಾನ್ಯ ಅಧ್ಯಕ್ಷರೆ, ನಾವು ಬೆಂಗಳೂರಿನಲ್ಲಿ ಒಂದು ಸೀಟು ಇರುವಂಥಾದ್ದು, ನಾವು ಆ ಒಂದು ಸೀಟಿನ ಪರವಾಗಿಯಾದರೂ ಮಾತನಾಡಬೇಕಲ್ಲಾ? ಕರ್ನಾಟಕ ಪೌರನಿಗಮಗಳ (ತಿದ್ದುಪಡಿ) ವಿಧೇಯಕ, 2009ಕ್ಕೆ

ಇವತ್ತು ಏನು ಒಂದು ತಿದ್ದುಪಡಿಯನ್ನು ತರುತ್ತಿದ್ದೀರಿ ಇದರಲ್ಲಿ ಕೆಲವು ನ್ಯೂನತೆಗಳಿವೆಯೆಂಬುದನ್ನು ಮಾನ್ಯ ಸೋಮಣ್ಣನವರಿಂದ ಹಿಡಿದು ಆಡಳಿತ ಪಕ್ಷದ ಮಾನ್ಯ ಅಶ್ವತ್ಥ್ ನಾರಾಯಣ್‌ರವರ ಆದಿಯಾಗಿ ಹೇಳಿದ್ದಾರೆ. ಇದರಲ್ಲಿ 16(2)ರಲ್ಲಿ ಪ್ರತಿ ಮೂರು ವರ್ಷಕ್ಕೊಮ್ಮೆ 15% ಜಾಸ್ತಿ ಮಾಡುತ್ತೇವೆಂದು ಹೇಳಿದ್ದೀರಿ. ಪ್ರತಿ ಮೂರು ವರ್ಷಕ್ಕೊಮ್ಮೆ 15% ಎಂದರೆ ಎಷ್ಟು ಆಯಿತು? ಅವರು ಕೇಳುತ್ತಿರುವಂಥಾದ್ದು ಇಷ್ಟೆ. 2000ನೇ ಇಸವಿಯಲ್ಲಿ ಏನು ಮಾಡಿದ್ದಾರೆ. ನೀವು ಅದನ್ನೇ ಮಾಡಿ, ಬೇಕಾದರೆ tax collection ಮಾಡಿ. ಇಲ್ಲಿ ಯಾರೂ tax collection ಮಾಡಬೇಡಿ ಎಂದು ಯಾರು ಹೇಳುತ್ತಾ ಇಲ್ಲ. ಇವತ್ತು ಬೆಂಗಳೂರು ನಗರದಲ್ಲಿ 28 ಸ್ಥಾನಗಳಲ್ಲಿ 17 ಸ್ಥಾನಗಳು ಬಿ.ಜೆ.ಪಿ.ಪಕ್ಷಕ್ಕೆ ಬಂದಿದೆ, 10 ಸ್ಥಾನಗಳು ಕಾಂಗ್ರೆಸ್ ಪಕ್ಷಕ್ಕೆ ಬಂದಿದೆ, ನಮ್ಮ ಪಕ್ಷಕ್ಕೆ 1 ಸ್ಥಾನ ಬಂದಿದೆ. ನೀವು ಬೆಂಗಳೂರು ನಗರದ ಜನತೆಗೆ ಏನು ಕೊಡುಗೆಯನ್ನು ಕೊಡುತ್ತಿರುವುದು ಎಂದು ಹೇಳಿ. ಇಲ್ಲಿ ಆಡಳಿತ ಪಕ್ಷದ ಮಾನ್ಯ ಆಶೋಕ್‌ರವರು ಮತ್ತು ಮಾನ್ಯ ಮುಖ್ಯಮಂತ್ರಿಯವರು ಇದ್ದಾರೆ. ದಯಮಾಡಿ ಇದರಲ್ಲಿ prestige ಪ್ರಶ್ನೆ ಎಂದು ಬೇಡ. ನೀವು ಕುಳಿತು ಚರ್ಚೆ ಮಾಡಿ ಎರಡು ಸದನಗಳ ಸದಸ್ಯರ ಒಂದು Joint Select Committee ಯನ್ನು ಮಾಡಿ. ನೀವು ಕೋರ್ಟ್ ಆದೇಶದಂತೆ ನೀವು implement ಮಾಡಿ. ಹಿಂದೆ ಮಾಡುವಾಗ ಸರಿಯಾದ ರೀತಿಯಲ್ಲಿ ಮಾಡಿಲ್ಲವೆಂದು Court direction ಕೊಟ್ಟಿದೆ. ಇದನ್ನು ಕಾಯಿದೆ ಪ್ರಕಾರ ಮಾಡಿಯೆಂದು ಕೊಟ್ಟಿದೆ. ಅದಕ್ಕೋಸ್ಕರವೇ ನಾವು ಎರಡೂ ಸದನಗಳ ಸದಸ್ಯರನ್ನು ಸೇರಿಸಿ Joint Select Committee ಮಾಡಿಯೆಂದು ಹೇಳುತ್ತಿದ್ದೇವೆ. ನಾವು ಟ್ಯಾಕ್ಸ್ ವಜಾ ಮಾಡಿಯೆಂದು ಹೇಳುತ್ತಾ ಇಲ್ಲ. ಇದಕ್ಕೆ ನಮ್ಮ ವಿರೋಧವಿದೆ.

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್ :- ಬೆಂಗಳೂರು ನಗರ ಅಭಿವೃದ್ಧಿಯಾಗಬೇಕೆಂಬುದು ನಮ್ಮ ಉದ್ದೇಶವಿರುವಂಥಾದ್ದು.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೆ ತಮ್ಮ ಗಮನಕ್ಕೆ ತಂದಿದ್ದೇನೆ. ಈಗ ಫೆಬ್ರವರಿ ತಿಂಗಳಲ್ಲಿ ಬಜೆಟ್ ಸೆಷನ್ ಸೇರುತ್ತದೆ. ತಾವು ಫೆಬ್ರವರಿ ತಿಂಗಳಲ್ಲಿ ಬಜೆಟ್ ಮಂಡಿಸುತ್ತಿದ್ದೀರೆಂದು ಗೊತ್ತಾಗಿದೆ. ಈಗ ನೀವು ಇದನ್ನು Joint Select Committee ಗೆ ಕಳುಹಿಸಿದರೆ ಅಲ್ಲಿ ಅವರು ಇದನ್ನು

ದೀರ್ಘವಾಗಿ ಅಭ್ಯಾಸ ಮಾಡಿ ಇದರ pros and cons ಎರಡನ್ನೂ ಕೂಡ ನೋಡುತ್ತಾರೆ, ಏಕೆಂದರೆ ಮಾನ್ಯ ಜಾರ್ಜ್‌ರವರು ಕೂಡ Urban Development Minister ಆಗಿ ಕೆಲಸ ಮಾಡಿರುವವರಾಗಿದ್ದಾರೆ, ಮಾನ್ಯ ಸೋಮಣ್ಣನವರು ಕೂಡ ಕೆಲಸ ಮಾಡಿದ್ದಾರೆ, ಮಾನ್ಯ ರೋಷನ್‌ಬೇಗ್‌ರವರಿಗೂ ಅನುಭವವಿದೆ. ಮಾನ್ಯ ದಿನೇಶ್ ಗುಂಡೂರಾವ್‌ರವರೂ ಇದ್ದಾರೆ, ಮತ್ತು ಮಾನ್ಯ ಸುರೇಶ್ ಕುಮಾರ್‌ರವರು ಕೂಡ ಕಾರ್ಪೊರೇಟರ್ ಆಗಿ, ಮಿನಿಸ್ಟರ್ ಆಗಿ ಕೆಲಸ ಮಾಡಿದ್ದಾರೆ, ಸುಮಾರು 30 ಜನ ಶಾಸಕರಿಗೆ ಹೆಚ್ಚು ಕಡಿಮೆ ಮಾಹಿತಿ ಇದೆ. ದಯವಿಟ್ಟು ಇದನ್ನು Joint Select committeeಗೆ ಕಳುಹಿಸಿದರೆ ಇದು 15-20 ದಿವಸಗಳಲ್ಲಿ ಮುಗಿಯುತ್ತದೆ.

(ಗೊಂದಲ)

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು :- ನಾವು ಜಾಸ್ತಿ ಮಾಡಿದರೆ ನೀವು ಕೇಳಬೇಕು. ನೀವು ಯಾತಕೋಸ್ಕರ ಬೇಡವೆಂದು ಹೇಳುತ್ತಿದ್ದೀರಿ. For what reason?

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ :- ವಾದ ವಿವಾದದಲ್ಲಿ ಸಮಸ್ಯೆಗಳು settle ಆಗುವುದಿಲ್ಲ. ನಾನು ಬರೆದುಕೊಂಡು ಬಂದು ಇಲ್ಲಿ ಹೇಳುತ್ತೇನೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು:- ಸಾರ್, ನಾನು ಒಂದು ನಿಮಿಷ ಹೇಳುತ್ತೇನೆ. ಇದರಲ್ಲಿ ಏನೂ ಇಲ್ಲ, ಸುಮ್ಮನೆ ನೀವು ವಿರೋಧ ಮಾಡುತ್ತಿದ್ದೀರಿ. ಅಷ್ಟೆ,

ಶ್ರೀ ಮಲ್ಲಿಕಾರ್ಜುನ ಖರ್ಗೆ :- ತಾವು ನಾನು ಹೇಳುವುದನ್ನು ಕೇಳಿ. ಇದು ಇದ್ದವರಿಗೆ ಗೊತ್ತಾಗುವುದಿಲ್ಲ. ಬೇರೆಯವರಿಗೆ ಅದರ ಪರಿಣಾಮ ಗೊತ್ತಾಗುತ್ತದೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು:- ನಾನು ಸ್ಲಮ್‌ನಲ್ಲಿ ಕೆಲಸ ಮಾಡಿದ್ದೇನೆ. ಎಸ್.ಸಿಗಳ ಮಧ್ಯೆ ಕೆಲಸ ಮಾಡಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಎಸ್.ಸಿ, ಎಸ್.ಟಿ.ಯಲ್ಲಿ ಏನಾದರೂ ಮಾಡಿಕೊಳ್ಳಿ, ಬೇಡವೆಂದು ಹೇಳುವುದಿಲ್ಲ. Vote ಬೇಕಾದರೆ ಮಾಡಿಕೊಳ್ಳಬೇಕಾಗುತ್ತದೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು :- ಅವರ ಜೊತೆಯಲ್ಲಿ ಕೆಲಸ ಮಾಡಿದ್ದೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಅದನ್ನು ಹೇಳಿಕೊಂಡೆ ಮುಂದುವರಿಯಿರಿ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು :- ಹಾಗೇ ಹೋಗುತ್ತೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ ನಾನು ಹೇಳುವುದೇನಂದರೆ ಮೂರು ವರ್ಷಗಳಿಗೊಮ್ಮೆ 15% ಅಂದರೆ within 12 years double ಆಗುತ್ತದೆ, ಹೆಚ್ಚು ಕಡಿಮೆ. ಇದರ ಅರ್ಥವೇನು? ಈಗ, ನಾಳೆ property value ಏನು? Rental value ಏನು? ಇದು ಏನೂ ಗೊತ್ತಾಗುವುದಿಲ್ಲ. ತಾವು ಇದನ್ನು ಕಾನೂನಿನಲ್ಲಿ mandatory ಆಗಿ ಉಳಿಸಿಕೊಂಡಾಗ ಅದನ್ನು ಯಾರಿಗೂ ಬದಲಾವಣೆ ಮಾಡುವುದಕ್ಕೆ ಆಗುವುದಿಲ್ಲ. ಇದನ್ನು ಪುನಃ ಅಸೆಂಬ್ಲಿ ಮುಂದೆ ತಂದು, ಬದಲಾವಣೆ ಮಾಡಿಕೊಳ್ಳಬೇಕೇ ಹೊರತು ನಾವು ಬದಲಾವಣೆ ಮಾಡಿಕೊಳ್ಳಲಿಕ್ಕಾಗುವುದಿಲ್ಲ. ರೂಲ್ಸ್ ಇದ್ದಿದ್ದರೆ ಏನಾಗುತ್ತದೆಂದರೆ, ಹೆಚ್ಚು ಕಡಿಮೆ ಮಿನಿಸ್ಟ್ರಿ ಲೆವೆಲ್‌ನಲ್ಲಿ ಅದನ್ನು ಬದಲಾವಣೆ ಮಾಡಿಕೊಳ್ಳುವುದಕ್ಕೆ ಆಗುತ್ತಾ ಇತ್ತು. ಆದರೆ ಕಾನೂನನ್ನು ಒಂದು ಸಾರಿ ತಂದ ಮೇಲೆ ಖಂಡಿತವಾಗಿ ಅದನ್ನು ಅಸೆಂಬ್ಲಿಯಲ್ಲಿ ಇಟ್ಟು ಅದನ್ನು ಪಾಸ್ ಮಾಡಿಕೊಂಡೇ ಅದನ್ನು ಸರಿಪಡಿಸಿಕೊಳ್ಳಬೇಕಾಗುತ್ತದೆ. ಅದಕ್ಕೆ ಇದನ್ನು Joint Select Committee ಗೆ ಕಳುಹಿಸಿದರೆ, ಒಂದು ತಿಂಗಳೊಳಗಾಗಿ ನಿಮಗೆ ಆಗುವುದಾದರೂ ಏನಿದೆ? ಆಕಾಶವೇನು ಕಡಿದು ಬೀಳುತ್ತದೆಯೇನು? ನೀವು ಇಲ್ಲಿಯವರೆಗೂ ಮಾಡಿದ್ದೀರಿ. ಇದಕ್ಕೆ ಎಲ್ಲರ ಸಲಹೆ ತೆಗೆದುಕೊಂಡು ಮಾಡಿಕೊಳ್ಳಿ ಎಂದರೆ, ಇಲ್ಲ ನಾವು ಮಾಡಿದ್ದೇವೆ, ಇದರಲ್ಲೇನಿದೆ? ಅಂದರೆ ಪ್ರತಿವರ್ಷ 5% ಕೊಡಬೇಕು, ಇದು ಸಾಧ್ಯನಾ? ಪ್ರತಿ ವರ್ಷ ಬ್ಯಾಂಕಿನ ಬಡ್ಡಿ 1% ಹೆಚ್ಚಿಗೆ ಆಗುತ್ತದಾ? ನಾವು ಇಲ್ಲಿ ಉಪಯೋಗ ಮಾಡಿಕೊಂಡು ಹೋಗುವಂತಹದ್ದು. ಈಗ ಅನೇಕ ಮನೆಗಳ ಮೇಲೆ towers ಹಾಕುತ್ತಾರೆ. ಅದಕ್ಕೆ ಹತ್ತು ಸಾವಿರ ರೂ.ಗಳನ್ನು ಹಾಕಿದ್ದೀರಿ, ಸಣ್ಣ ಪುಟ್ಟ advertisement ಅದಕ್ಕೂ tax ಇದೆ. ಇದೆಲ್ಲವೂ ಕೂಡ ಇದರಲ್ಲಿದೆ. ಒಂದಲ್ಲ , ನೀವು ನೋಡಿದರೆ ಗೊತ್ತಾಗುತ್ತದೆ. ಅನೇಕ ಕಡೆ ದುಪ್ಪಟ್ಟು ತೆರಿಗೆ ಏರಿಕೆ ಇದೆ, ಮತ್ತೆ ವಾಸದ ಮನೆಗಳ ಮೇಲೆ ಏನಾದರೂ ದೂರವಾಣಿ ಸಂಪರ್ಕ towerಗಳಿದ್ದರೆ ಹತ್ತು ಸಾವಿರ ರೂ.ಗಳು. ಇನ್ನು ದೂರಸಂಪರ್ಕ tower ಗಳು ಇದ್ದರೆ ವಾರ್ಷಿಕ ಹದಿನೈದು

ಸಾವಿರ ರೂಪಾಯಿಗಳು, ಅಂದರೆ 5,000 ರೂಪಾಯಿಗಳು ಹೆಚ್ಚಾಯಿತು. ಇವೆಲ್ಲವೂ ಮತ್ತೆ ಮೂರು ವರ್ಷಕ್ಕೊಮ್ಮೆ 15%. ಅದಕ್ಕಾಗಿ controversy ಯಾಗುವುದಕ್ಕಿಂತಲೂ ನೀವು ಫೆಬ್ರವರಿಯಲ್ಲಿ regular bill ತರುವುದಕ್ಕೆ ಆಗುತ್ತದೆ. ಈಗ ನೀವು ಇದನ್ನು Joint Select Committee ಗೆ ಕಳುಹಿಸಿಕೊಡಿ.

(ಗೊಂದಲ)

ಶ್ರೀ ಆರ್. ರೋಷನ್ ಬೇಗ್ :- ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಇದನ್ನು Joint Select Committeeಗೆ refer ಮಾಡಿ.

ಶ್ರೀ ಆರ್. ಅಶೋಕ್ :- ಈಗಾಗಲೇ ಬಹಳಷ್ಟು ಪ್ರಶ್ನೆಗಳಿಗೆ ನಾನು ಉತ್ತರವನ್ನು ಕೊಟ್ಟಿದ್ದೇನೆ. ಮತ್ತೊಂದು ಸಲ ಹೇಳುತ್ತಿದ್ದೇನೆ. 2000ದ ಇಸವಿಯಲ್ಲಿ ಏನು S.A.S. ಅನ್ನು ತಂದಿದ್ದರು ಅದಕ್ಕೆ ಕಾನೂನಿನ ಹಿಡಿತ ಇರಲಿಲ್ಲ, ಅದು ಕಾನೂನು ಆಗಿರಲಿಲ್ಲ. ಕೋರ್ಟಿಗೆ ಹೋದಾಗ, ಕೋರ್ಟಿನವರು ಇದಕ್ಕೆ ಕಾನೂನು ಇಲ್ಲ, ಕಾನೂನು ಮಾಡಿ ಎಂದು ಹೇಳಿದರು. ಅದಕ್ಕೋಸ್ಕರ ಈ ತಿದ್ದುಪಡಿಯನ್ನು ತಂದಿರುವುದು.

ಶ್ರೀ ಕೆ.ಜೆ. ಜಾರ್ಜ್:- ಮಾನ್ಯ ಸಚಿವರು ನಿಜವಾದ problemಅನ್ನು ಹೇಳುತ್ತಿಲ್ಲ. 2000ದ ಇಸವಿಯಲ್ಲಿ ಗೈಡೆನ್ಸ್ ವ್ಯಾಲ್ಯೂ ಏನಿತ್ತು, ಇವತ್ತು ಗೈಡೆನ್ಸ್ ವ್ಯಾಲ್ಯೂ ಏನಿದೆ?

(ಗೊಂದಲ)

SRI R. ROSHAN BAIG:- Joint Select Committeeಗೆ refer ಮಾಡಿಬಿಡಿ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್ :- ಯಾವ ಆಧಾರದ ಮೇಲೆ ಮಾಡುತ್ತಿದ್ದೀರಿ?

(ಗೊಂದಲ)

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು:- ಪ್ರಚಾರಕ್ಕೋಸ್ಕರ ಪ್ರತಿಭಟನೆ ಮಾಡುತ್ತೀರಿ. ಪ್ರಚಾರಕ್ಕೋಸ್ಕರ ಪ್ರತಿಭಟನೆ ಮಾಡಬೇಡಿ, ಪ್ರಚಾರಕ್ಕೋಸ್ಕರ ವಿರೋಧ ಮಾಡಬೇಡಿ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು :- ಏನೋ ಬೇರೋ ಉದ್ದೇಶ ಇಟ್ಟುಕೊಂಡು ಈ ಬಿಲ್‌ಅನ್ನು ತಂದಿದ್ದಾರೆ.

(ಗೊಂದಲ)

ಶ್ರೀ ಆರ್. ಅಶೋಕ್ :- C.V.S. ಬಗ್ಗೆ ಏನು ಹೇಳಿದ್ದಾರೆ, ಅದನ್ನು 2003ರಲ್ಲಿ ಕಾಂಗ್ರೆಸ್ಸಿನವರು ತಂದರು.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್ :- ಅಶೋಕ್‌ರವರೇ, ಸದನವನ್ನು ತಪ್ಪು ದಾರಿಗೆ ಎಳೆಯಬೇಡಿ. ನಾವು ಹೇಳುತ್ತಿರುವುದೇನೆಂದರೆ, 2000ದ ಇಸವಿಯಲ್ಲಿ ಗೈಡೆನ್ಸ್ ವ್ಯಾಲ್ಯೂ ಎಷ್ಟಿತ್ತು, 2009ರಲ್ಲಿ ಎಷ್ಟಿದೆ ಎನ್ನುವುದನ್ನು ಹೇಳಿ. ಯಾವ ಗೈಡೆನ್ಸ್ ವ್ಯಾಲ್ಯೂವನ್ನು ತೆಗೆದುಕೊಳ್ಳುತ್ತೀರಿ ಎನ್ನುವುದನ್ನು ಹೇಳಿ.

ಶ್ರೀ ಆರ್. ಅಶೋಕ್ :- ಆಯಿತು, ನೀವು ಹೇಳಿದ್ದನ್ನು ಒಪ್ಪಿಕೊಳ್ಳುತ್ತೇನೆ.

(ಗೊಂದಲ)

ಅಧ್ಯಕ್ಷರು :- ಎಲ್ಲರೂ ಕುಳಿತುಕೊಳ್ಳಿ. ಯಾವಾಗ ಚರ್ಚೆಗೆ ಅವಕಾಶ ಕೊಟ್ಟಿದ್ದೆವೋ ಆಗ ನೀವು ಕೇಳಲಿಲ್ಲ. ಈಗ ಎಲ್ಲ ಮುಗಿದ ಮೇಲೆ ಕೇಳುತ್ತಿದ್ದೀರಿ ನಾಡಗೌಡರೇ, ಏನಿದು? ಚರ್ಚೆ ಪ್ರಾರಂಭವಾದಾಗ ಕೇಳಿದಿರೇ ನೀವು. ಈಗ ಕೇಳುತ್ತಿದ್ದೀರಿ. ದಯವಿಟ್ಟು ಕುಳಿತುಕೊಳ್ಳಿ. ಯಾವಾಗ ಕೇಳಬೇಕೋ ಆಗ ಕೇಳುವುದಿಲ್ಲ. ದಯವಿಟ್ಟು ಕುಳಿತುಕೊಳ್ಳಿ. ಕರಡಿ ಸಂಗಣ್ಣನವರೇ ಕುಳಿತುಕೊಳ್ಳಿ.

ಶ್ರೀ ಆರ್. ಅಶೋಕ್ :- ನಾನೇನಾದರೂ ತಪ್ಪು ಹೇಳಿದ್ದರೆ, ದಯವಿಟ್ಟು ಸದಸ್ಯರು ಅದನ್ನು ನಾನು ಮಾತನಾಡಿದ ಮೇಲೆ . . . . .

ಶ್ರೀ ಕರಡಿ ಸಂಗಣ್ಣ ಅಮರಪ್ಪ :- ನೀವು ಅಲ್ಲಿಯೂ ಬೆಂಗಳೂರು, ಇಲ್ಲಿಯೂ ಬೆಂಗಳೂರು ಎಂದರೆ ಹೇಗೆ?

ಅಧ್ಯಕ್ಷರು :- ಚರ್ಚೆ ಚಾಲೂ ಆದಾಗ ಕೇಳಬೇಕಿತ್ತು.

ಶ್ರೀ ಕರಡಿ ಸಂಗಣ್ಣ ಅಮರಪ್ಪ :- ಚರ್ಚೆ ಆಯಿತಲ್ಲ, ಎಷ್ಟು ಹೊತ್ತು ಚರ್ಚೆ ಮಾಡುವುದು? ನಮಗೂ ಸ್ವಲ್ಪ ಅವಕಾಶ ಕೊಡಿ. ಉತ್ತರ ಕರ್ನಾಟಕದ ಬಗ್ಗೆ ನಾವು ಬೆಳಕು ಚೆಲ್ಲಬೇಕಾಗಿದೆ.

ಅಧ್ಯಕ್ಷರು :- ಆಯಿತು, ಕೊಡುತ್ತೇನೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ :- ಬರೀ ಬೆಂಗಳೂರಿನದೇ ಆಯಿತು, ಅಲ್ಲಿಯೂ ಬೆಂಗಳೂರು, ಇಲ್ಲಿಯೂ ಬೆಂಗಳೂರು ಆದರೆ ಹೇಗೆ? ಇದನ್ನು ತಾವು ನಿಯಂತ್ರಣ ಮಾಡಿ.

ಅಧ್ಯಕ್ಷರು :- ಹಾಗಿದ್ದರೆ ಕಾನೂನು ಮಾಡುವುದು ಬೇಡವೇ?

ಶ್ರೀ ಕರಡಿ ಸಂಗಣ್ಣ ಅಮರಪ್ಪ :- ಕಾನೂನು ಬೇಕು, ಕಾನೂನು ಬೇಡ ಎಂದು ಅಲ್ಲ. ನಮಗೆ ಅವಕಾಶ ಎಲ್ಲಿದೆ? ನಾಳೆ ಒಂದೇ ದಿವಸ ಇರುವುದು.

ಅಧ್ಯಕ್ಷರು :- ಆಯಿತು, ಕುಳಿತುಕೊಳ್ಳಿ.

ಶ್ರೀ ಹೆಚ್.ಡಿ. ರೇವಣ್ಣ :- ಮಾನ್ಯ ಅಧ್ಯಕ್ಷರೆ, ಅವರು ಕೇಳುತ್ತಿರುವುದು ಏನೆಂದರೆ, ಇದನ್ನು ಬೆಂಗಳೂರಿನಲ್ಲಿ ಚರ್ಚೆ ಮಾಡಿ, ಏತಕ್ಕೆ ಉತ್ತರ ಕರ್ನಾಟಕದಲ್ಲಿ ಸಭೆ ಕರೆದು ಹೀಗೆ ಕಾಲಹರಣ ಮಾಡುತ್ತಿದ್ದೀರಿ ಎಂದು ಕೇಳುತ್ತಿದ್ದಾರೆ.

ಶ್ರೀ ಆರ್. ಅಶೋಕ್ :- ಅವರು ಚರ್ಚೆ ಮಾಡುತ್ತಿರುವುದು ಏನೆಂದರೆ, ಅದರಲ್ಲಿ ಈ ರೀತಿ ರಿಯಾಯಿತಿ ಕೊಡಿ, ಆ ರೀತಿ ರಿಯಾಯಿತಿ ಕೊಡಿ ಎಂದು ಹೇಳಿದ್ದಾರೆ. ನಾವು ಈಗ ಇಲ್ಲಿ Rulesಅನ್ನು frame ಮಾಡುತ್ತಿಲ್ಲ, Actಅನ್ನು ತರುತ್ತಿದ್ದೇವೆ. ಮತ್ತೊಂದು ಸಲ ಹೇಳುತ್ತಿದ್ದೇನೆ, ನನ್ನಿಂದ ಏನಾದರೂ ತಪ್ಪಾಗಿದ್ದರೆ ದಯವಿಟ್ಟು ಕ್ಷಮಿಸಿ, ನಂತರ ಕ್ಲಾರಿಫಿಕೇಷನ್ ಆಗಲಿ. C.V.S. system, . . .

(ಗೊಂದಲ)

ಶ್ರೀ ಆರ್. ಅಶೋಕ್ :- ಮತ್ತೇ ಮಾತನಾಡುತ್ತೀರಲ್ಲ. . . .

(ಗೊಂದಲ)

ಅಧ್ಯಕ್ಷರು :- ನೀವು ಸ್ಪಷ್ಟೀಕರಣ ಕೇಳಿದಿರಿ, ಎಲ್ಲವೂ ಮುಗಿಯಿತು.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್ :- ರೂಲ್ಸ್ ಮಾಡುವುದಕ್ಕೆ ಯಾರಿಗೆ ಪವರ್ಸ್ ಕೊಟ್ಟಿದ್ದೀರಿ. ಕಮೀಷನರ್‌ಗೆ ಕೊಟ್ಟಿದ್ದೀರಿ. ನಿಮಗೆ ಪವರ್ ಇಲ್ಲ ಈಗ.

(ಗೊಂದಲ)

ಅಧ್ಯಕ್ಷರು :- ಜಾರ್ಜ್‌ರವರೇ ನೀವು ಸಲಹೆ ಸೂಚನೆಗಳನ್ನು ಕೊಟ್ಟಿದ್ದೀರಿ. ಸರ್ಕಾರದವರು ವಿಚಾರ ಮಾಡುತ್ತಾರೆ. ಮತ್ತೆ ಅದನ್ನೇ ರಿಪೀಟ್ ಮಾಡುವುದರಲ್ಲಿ ಅರ್ಥವಿಲ್ಲ.

ಶ್ರೀ ಕೆ.ಜೆ. ಜಾರ್ಜ್:- ರೂಲ್ಸ್ ಮಾಡುವುದಕ್ಕೆ ಪವರ್‌ಅನ್ನು ಕಮೀಷನರ್‌ರವರಿಗೆ ಕೊಟ್ಟಿದ್ದಾರೆ. ಬೇಕಾದರೆ ಅದನ್ನು ನೀವು ಇಟ್ಟುಕೊಳ್ಳಿ, ನಿಮ್ಮ ಹತ್ತಿರ discussionಗೆ ಬರುತ್ತೇವೆ.

(ಗೊಂದಲ)

ಅಧ್ಯಕ್ಷರು :- ಅಶೋಕ್‌ರವರೇ, ತಾವು ಮುಗಿಸಿ.

ಶ್ರೀ ಆರ್. ಅಶೋಕ್:- ಈ ತೆರಿಗೆಯನ್ನೇನು ನಾವು ಬೆಂಗಳೂರಿನ ಜನಗಳಿಗೆ introduce ಮಾಡುತ್ತಿದ್ದೇವೆ, ಇದು ಜನಸ್ನೇಹಿಯಾದಂಥ ತೆರಿಗೆ ಎಂದು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ನೀವು ಇಲ್ಲ ಎಂದರೂ ಪರವಾಗಿಲ್ಲ. ಬೆಂಗಳೂರಿನ ಜನತೆಗೆ ನಾವು ಜನಸ್ನೇಹಿಯಾದಂಥ ಈ ತೆರಿಗೆ ಪದ್ಧತಿಯನ್ನು ತರುತ್ತಿದ್ದೇವೆ. ಎರಡು ವರ್ಷಗಳಿಂದ ನಾವು ತೆರಿಗೆ ಕಲೆಕ್ಟ್ ಮಾಡಿಲ್ಲ. ಇದರಿಂದ, Income Tax ಮತ್ತು ಇನ್ನಿತರ ಬೇರೆಬೇರೆ tax payers ಯಾರಿದ್ದಾರೆ ಅವರಿಗೆ ತೊಂದರೆಯಾಗುತ್ತಿದೆ. ಆದ್ದರಿಂದ ತೆರಿಗೆ ಸಂಗ್ರಹ ಮಾಡುವ ಪದ್ಧತಿಯನ್ನು immediateಆಗಿ ತರಬೇಕು ಎನ್ನುವ ದೃಷ್ಟಿಯಿಂದ ಇವತ್ತು ನಾವು ಇದನ್ನು ತಂದಿದ್ದೇವೆ. ಈ ವಿಚಾರದಲ್ಲಿ ನನ್ನದೇನಾದರೂ ತಪ್ಪಿದ್ದರೆ ಕ್ಷಮಿಸಿ. C.V.S. ಅನ್ನು 2003ರಲ್ಲಿ ತಂದಿದ್ದಾರೆ. ಇಡೀ ರಾಜ್ಯದಲ್ಲಿ ಎಲ್ಲಾ ನಗರಸಭೆ, ಕಾರ್ಪೊರೇಷನ್‌ಗಳಲ್ಲಿ C.V.S. ಪದ್ಧತಿಯೇ ನಡೆಯುತ್ತಿದೆ. ಬೆಂಗಳೂರು ಹೊರವಲಯದಲ್ಲಿರತಕ್ಕಂಥ ಏಳು ನಗರಸಭೆಗಳಲ್ಲೂ ಈ C.V.S. ಪದ್ಧತಿಯನ್ನು ತಂದಿದ್ದಾರೆ. ಅದರ ವಿರುದ್ಧವಾಗಿ ಬೆಂಗಳೂರಿನ ಜನತೆ ಪ್ರತಿಭಟನೆ ಮಾಡಿದಾಗ ನಾವು ಈ S.A.S. ಪದ್ಧತಿಯನ್ನು ತಂದಿದ್ದೇವೆ. ಹತ್ತು ವರ್ಷದಿಂದ ಏರಿಕೆ ಮಾಡಿಲ್ಲ, ನೀವು 20% ಏರಿಕೆ ಮಾಡಿ ಎಂದು ಜನ ಏನು ಹೇಳಿದ್ದರು, ಅದನ್ನೂ ನಾವು ಇವತ್ತು ವಾಪಸ್ಸು ತೆಗೆದಿದ್ದೇವೆ.

2000ದ ಇಸವಿಯಲ್ಲಿ S.A.S. ಪದ್ಧತಿಯಲ್ಲಿ ಏನು ತೆರಿಗೆಯನ್ನು ಕಟ್ಟುತ್ತಿದ್ದರು, ಅದೇ ತೆರಿಗೆ ಪದ್ಧತಿಯನ್ನೇ ತರಬೇಕು ಎನ್ನುವ ಸದುದ್ದೇಶವನ್ನಿಟ್ಟುಕೊಂಡು ನಾವು ಮಾಡುತ್ತಿದ್ದೇವೆ. ಆದ್ದರಿಂದ ದಯವಿಟ್ಟು ಇದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು :- ಈಗ ಪರ್ಯಾಲೋಚನಾ ಪ್ರಸ್ತಾವ.

(ಗೊಂದಲ)

(ಈ ಹಂತದಲ್ಲಿ ಜೆ.ಡಿ.(ಎಸ್) ಮತ್ತು ಕಾಂಗ್ರೆಸ್ ಪಕ್ಷದ ಶಾಸಕರು ಧರಣಿ ನಡೆಸಲು ಸದನದ ಬಾವಿಗೆ ಬಂದರು)

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ;

"2009ರ ಕರ್ನಾಟಕ ಪೌರನಿಗಮಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 4ರವರೆಗೆ

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ "ಖಂಡ 2 ರಿಂದ 4 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 4ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ;

ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮ ಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಆರ್. ಅಶೋಕ್ (ಸಾರಿಗೆ ಸಚಿವರು):- ಮಾನ್ಯ ಅಧ್ಯಕ್ಷರೆ, 2009ರ ಕರ್ನಾಟಕ ಪೌರನಿಗಮಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು:- ಪ್ರಸ್ತಾವ ಏನೆಂದರೆ.

"2009ರ ಕರ್ನಾಟಕ ಪೌರನಿಗಮಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಅಧ್ಯಕ್ಷರು :- ದಯವಿಟ್ಟು ಎಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಹೋಗಬೇಕು. ಈಗ ಮುಂದಿನ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳುತ್ತೇನೆ. ಇನ್ನೂ ಹಲವಾರು ಬಿಲ್‌ಗಳಿವೆ. ಅವುಗಳ ಬಗ್ಗೆ ಚರ್ಚೆಯಾಗಬೇಕು, ಅವುಗಳಿಗೆ ಸದನದ ಒಪ್ಪಿಗೆಯನ್ನು ತೆಗೆದುಕೊಳ್ಳಬೇಕು. ದಯವಿಟ್ಟು ತಮ್ಮ ಸ್ಥಾನಗಳಿಗೆ ಹೋಗಿ. ನಿಮ್ಮ ವಿಚಾರಗಳನ್ನು ನೀವು ಹೇಳಿದಿರಿ. ಮಂತ್ರಿಗಳು ಬಿಲ್‌ಅನ್ನು ಪಾಸ್ ಮಾಡಿಕೊಂಡಿದ್ದಾರೆ. ತಾವು ತಮ್ಮ ಅಭಿಪ್ರಾಯಗಳನ್ನು ಹೇಳಿದಿರಿ, ಸಲಹೆ, ಸೂಚನೆಗಳನ್ನು ಕೊಟ್ಟಿದ್ದೀರಿ. ಅದನ್ನು ಸರ್ಕಾರ ತೆಗೆದುಕೊಂಡಿದೆ. ಈಗ ಬಿಲ್ ಪಾಸ್ ಆಗಿದೆ. ಈಗ ದಯವಿಟ್ಟು ಮುಂದಿನ ಬಿಲ್‌ಗಳನ್ನು ಪಾಸ್ ಮಾಡಲು ಅವಕಾಶ ಮಾಡಿಕೊಡಬೇಕು.

(ಸದನದ ಬಾವಿಯಿಂದ ಧರಣಿ ನಿರತ ಸದಸ್ಯರು ಘೋಷಣೆಗಳನ್ನು ಕೂಗುತ್ತಿದ್ದರು)

ಅಧ್ಯಕ್ಷರು :- ಈಗ ಸದನವನ್ನು ಮಧ್ಯಾಹ್ನ 2.30 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 1ಗಂಟೆ 28 ನಿಮಿಷಗಳಿಗೆ ಮುಂದೂಡಲ್ಪಟ್ಟು ಪುನ: ಮಧ್ಯಾಹ್ನ 2.30ಕ್ಕೆ ಸೇರಲು ನಿಶ್ಚಯಿಸಿತು)